# ಕನ್ನಡಿಗರ ಉದ್ಯೋಗ ವೇದಿಕೆ(ರಿ)

ಸಂ. 84, 8ನೇ ಮುಖ್ಯರಸ್ತೆ, 3ನೇ ಬ್ಲಾಕ್, ಜಯನಗರ, ಬೆಂಗಳೂರು-560011

ಫೋನ್ : 9686399182 / 9019957427

ಅಂತರ್ಜಾಲ ತಾಣ : www.kannadigara udyoga vedike.org

ಮಿಂಚಂಚೆ : vinutha.moola@gmail.com / vinutha@kuv.co.in /support@kuv.co.in



## ಸಮಿತಿಯ 58 ಶಿಫಾರಸ್ಸುಗಳ ಸಾರಾಂಶ ಮತ್ತು ಕರ್ನಾಟಕ ಸರಕಾರ ಒಪ್ಪಿಕೊಂಡ 45 ಶಿಫಾರಸ್ಸುಗಳು.

1. ರಾಷ್ಟ್ರೀಯ ಐಕ್ಯತಾ ಪರಿಷತ್ತಿನಿಂದ ರಚಿಸಲಾದ ಉಪ ಸಮಿತಿಯೊಂದು ಸರಕಾರಿ ಮತ್ತು ಖಾಸಗಿ ವಲಯಗಳ ಉದ್ಯಮಗಳಲ್ಲಿ ಸ್ಥಳೀಯ ಅಭ್ಯರ್ಥಿಗಳಿಗೆ ದೊರೆಯುತ್ತಿರುವ ಉದ್ಯೋಗಾವಕಾಸದ ಬಗ್ಗೆ ಪರಿಶೀಲನೆ ನಡೆಸಿತ್ತು. ಈ ಉಪಸಮಿತಿಯ ರಾಜ್ಯಗಳಲ್ಲಿ ಸ್ಥಳೀಯ ಅಭ್ಯರ್ಥಿಗಳಿಗೆ ಸಾಕಷ್ಟು ಪ್ರಮಾಣದಲ್ಲಿ ಉದ್ಯೋಗಾವಕಾಸ ದೊರೆಯದೆ ಇದ್ದುದರಿಂದ ಉಂಟಾದ ಅತೃಪ್ತಿಯನ್ನು ಗಮನಿಸಿ, ಅರ್ಹತೆಯುಳ್ಳ ಸ್ಥಳೀಯ ಅಭ್ಯರ್ಥಿಗಳು ಲಭ್ಯವಿರುವಾಗ ಉದ್ಯೋಗಾವಕಾಶದಲ್ಲಿ ಅವರಿಗೆ ಹೆಚ್ಚಿನ ಭಾಗ ದೊರಕಿಸುವಂತೆ ಶಿಫಾರಸು ಮಾಡಿರುವುದು. ಶಿಫಾರಸನ್ನು ರಾಷ್ಟ್ರೀಯ ಐಕ್ಯತಾ ಪರಿಷತ್ತು ಅದರ ದಿನಾಂಕ :22ನೇ ಜೂನ್ 1968ರಂದು ನಡೆದ ಸಭೆಯಲ್ಲಿ ಅಂಗೀಕರಿಸಿತು. ಈ ಶಿಫಾರಸಿನ ಮೇಲೆ ಕೇಂದ್ರ ಸರಕಾರವು ಯಾವ ಕ್ರಮವನ್ನು ತೆಗೆದುಕೊಂಡಂತೆ ಕಾಣುವುದಿಲ್ಲ. ಡಾ ಸರೋಜಿನಿ ಮಹಿಷಿ ಸಮಿತಿಯು ಮಾಡುವ ಶಿಫಾರಸುಗಳು ಪರಿಷತ್ತಿನ ಶಿಫಾರಸುಗಳಿಗೆ ಅನುಗುಣವಾಗಿರುವುವು. ಆದುದರಿಂದ ಡಾ. ಸರೋಜಿನಿ ಮಹಿಷಿ ಸಮಿತಿಯ ಸಲಹೆಗಳನ್ನು ಕಾರ್ಯರೂಪಕ್ಕೆ ತರುವಂತೆ ರಾಜ್ಯ ಸರಕಾರವು ನೋಡಿಕೊಳ್ಳಬೇಕು ಹಾಗೂ ಕೇಂದ್ರ ಸರಕಾರವನ್ನು ಕೇಳಿಕೊಳ್ಳಬೇಕು.

   ಸಚಿವ ಸಂಪುಟದ ಉಪ ಸಮಿತಿಯು - ಈ ಶಿಫಾರಸನ್ನು ಸೈದ್ಧಾಂತಿಕವಾಗಿ ಒಪ್ಪಿಕೊಂಡಿದೆ.

2. ಕೇಂದ್ರ ಸರಕಾರದ ಬ್ಯೂರೋ ಆಪ್ ಪಬ್ಲಿಕ್ ಎಂಟರ್ ಪ್ರೈಸಸ್ ಸಂಸ್ಥೆಯು ಸರಕಾರಿ ವಲಯದ ಉದ್ಯಮಗಳಲ್ಲಿ ವೇತನ ಶ್ರೇಣಿ ರೂ. 1,250 ರ ವರೆಗೆ ಇರುವ ಎಲ್ಲಾ ಹುದ್ದೆಗಳಿಗೆ ನ್ಯಾಷನಲ್ ಎಂಪ್ಲಾಯ್ ಮೆಂಟ್ ಸರ್ವಿಸಸ್ ಮೂಲಕ ಅಭ್ಯರ್ಥಿಗಳನ್ನು ನೇಮಕ ಮಾಡಬೇಕೆಂದು ಆದೇಶಿಸಿದೆ. ಮೇಲ್ಮಟ್ಟದ ಹುದ್ದೆಗಳಿಗೆ ಕೆಲವೆಡೆಯಲ್ಲಿ ಅಖಿಲ ಭಾರತ ಮಟ್ಟದಲ್ಲಿ ಅಭ್ಯರ್ಥಿಗಳನ್ನು ಆಯ್ಕೆಮಾಡುವ ಪದ್ಧತಿ ಇದೆ. ಒಂದು ರಾಜ್ಯದಿಂದ ಇನ್ನೊಂದು ರಾಜ್ಯಕ್ಕೆ ವರ್ಗಾವಣೆ ಮಾಡುವ ಅವಶ್ಯಕತೆಯೂ ಇದೆ. ಆದರೆ ಗ್ರೂಪ್ 'ಡಿ' ಹುದ್ದೆಗಳಿಗೆ ಹೊರ ರಾಜ್ಯದ ಅಭ್ಯರ್ಥಿಗಳನ್ನು ಆಯ್ಕೆ ಮಾಡುವುದು ಉಚಿತವಲ್ಲ. ರಾಜ್ಯದ ಉದ್ಯೋಗ ವಿನಿಮಯ ಕೇಂದ್ರಗಳಲ್ಲಿ ದಿನಾಂಕ : 23ನೇ ಜುಲೈ 1981ಕ್ಕಿಂತ ಹಿಂದೆ ಕನ್ನಡೇತರರ ಹೆಸರುಗಳನ್ನೂ ನೋಂದಾಯಿಸಲಾಗಿದೆ. ಇವೆಲ್ಲಾ ವಿಷಯಗಳನ್ನು ಗಮನದಲ್ಲಿಟ್ಟುಕೊಂಡು ಕೇಂದ್ರ ಸರಕಾರಿ ವಲಯದ ಉದ್ಯಮಗಳಲ್ಲಿ ಕನ್ನಡಿಗರಿಗೆ ಸಲ್ಲತಕ್ಕ ಉದ್ಯೋಗ ಪ್ರಮಾಣ ಈ ಕೆಳಗಿನಂತಿರಬೇಕೆಂದು ಸಮಿತಿ ಶಿಫಾರಸು ಮಾಡಿವುದು.

ನಾಲ್ಕನೆಯ ವರ್ಗದ ( ಗ್ರೂಪ್ ಡಿ) ಹುದ್ದೆಗಳಲ್ಲಿ ............ ಶೇ. 100

ವೇತನ ಶ್ರೇಣಿ ರೂ. 1250 ರ ತನಕ ಇರುವ ಇತರ ಹುದ್ದೆಗಳಲ್ಲಿ .......... ಶೇ. 80

ಉಳಿದ ಮೇಲ್ಮಟ್ಟದ ನೇರ ನೇಮಕಾತಿ ಆಧಾರದ ಮೇಲೆ ಭರ್ತಿ ಮಾಡುವ ಹುದ್ದೆಗಳಲ್ಲಿ .......... ಶೇ. 65

ಯಾವ ಹುದ್ದೆಗಳಲ್ಲಿ ಈಗ ಇರುವ ಕನ್ನಡಿಗರ ಪ್ರಮಾಣ ಕಡಿಮೆ ಇದೆಯೋ ಅಂತಹ ಹುದ್ದೆಗಳಿಗೆ ಕನ್ನಡಿಗರ ಸಂಖ್ಯೆ ನಿರ್ದಿಷ್ಟ ಪ್ರಮಾಣ ತಲಪುವ ತನಕ ಎಲ್ಲಾ ಖಾಲಿ ಹುದ್ದೆಗಳಿಗೆ ಕನ್ನಡಿಗರನ್ನೇ ನೇಮಿಸಬೇಕು.

ಸಚಿವ ಸಂಪುಟದ ಉಪ ಸಮಿತಿಯು - ಕೇಂದ್ರ ಸಾರ್ವಜನಿಕ ಉದ್ದಿಮೆಗಳಲ್ಲಿ ಗ್ರೂಪ್ 'ಸಿ' ಮತ್ತು ಗ್ರೂಪ್ 'ಡಿ' ಹುದ್ದೆಗಳಿಗೆ ಶೇಕಡಾ 100ರಷ್ಟು ಮತ್ತು ಗ್ರೂಪ್ 'ಬಿ' ಹುದ್ದೆಗಳಿಗೆ ಶೇಕಡಾ 80ಕ್ಕೆ ಕಡಿಮೆ ಇಲ್ಲದಂತೆ ಮತ್ತು ಗ್ರೂಪ್ 'ಎ' ಹುದ್ದೆಗಳಿಗೆ ಶೇಕಡಾ 65 ರಷ್ಟು ಕನ್ನಡಿಗರನ್ನು ನೇಮಿಸಿಕೊಳ್ಳಬೇಕು. ರಾಜ್ಯ ಸರಕಾರದ ಅಥವಾ ಅಖಿಲ ಭಾರತ ಸೇವೆಯ ಅಧಿಕಾರಿಗಳನ್ನು ಈ ನೇಮಕಾತಿಯ

ಸಮಯದಲ್ಲಿ ಒಡಗೂಡಿಸಬೇಕು. ಕೇಂದ್ರ ಸಾರ್ವಜನಿಕ ಉದ್ದಿಮೆಗಳನ್ನು ಸ್ಥಾಪಿಸಲು ನೆಲ, ಜಲ, ವಿದ್ಯುಚ್ಛಕ್ತಿ ಮುಂತಾದವುಗಳನ್ನು ರಾಜ್ಯ ಸರಕಾರವು ನೀಡುವಾಗ ಮೇಲೆ ನಮೂದಿಸಿರುವ ಪೂರ್ವ ಷರತ್ತುಗಳನ್ನು ಹಾಕಬೇಕು ಎಂದು ಒಪ್ಪಿಕೊಂಡಿದೆ .

3. ರಾಜ್ಯ ಸರಕಾರಿ ವಲಯದ ಉದ್ಯಮಗಳಲ್ಲಿ ಉನ್ನತ ಮಟ್ಟದ ತಾಂತ್ರಿಕ ಅರ್ಹತೆಯುಳ್ಳ ಅಭ್ಯರ್ಥಿಗಳು ದೊರೆಯದೆ ಇರುವ ಹುದ್ದೆಗಳನ್ನು ಬಿಟ್ಟು ಇನ್ನುಳಿದ ಎಲ್ಲಾ ಹುದ್ದೆಗಳಿಗೆ ಕನ್ನಡಿಗರನ್ನೇ ನೇಮಿಸಬೇಕು. ಈ ನೀತಿಯ ಪರಿಪಾಲನೆ ಬಗ್ಗೆ ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ ಎಚ್ಚರ ವಹಿಸಬೇಕು.

ಸಚಿವ ಸಂಪುಟದ ಉಪ ಸಮಿತಿಯು - ರಾಜ್ಯ ಸಾರ್ವಜನಿಕ ಉದ್ದಿಮೆಗಳಲ್ಲಿ ಎಲ್ಲಾ ಹಂತಗಳಲ್ಲಿ ಶೇಕಡಾ 100 ರಷ್ಟು ಕನ್ನಡಿಗರನ್ನು ನೇಮಕಾತಿ ಮಾಡಿಕೊಳ್ಳಬೇಕು. ವಿಶೇಷ ಪರಿಣತಿ ಬೇಕಾಗಿರುವ ಗ್ರೂಪ್ 'ಎ' ಮತ್ತು ಗ್ರೂಪ್ 'ಬಿ' ಹುದ್ದೆಗಳಿಗೆ ನೇಮಕಾತಿ ಮಾಡುವಾಗ ರಾಜ್ಯ ಸರಕಾರದ ಅನುಮತಿಯನ್ನು ಪಡೆದು ಅನಂತರ ಮಾತ್ರ ಈ ನಿರ್ಬಂಧದಿಂದ ವಿನಾಯತಿ ನೀಡಬಹುದು .ಈ ಧ್ಯೇಯವನ್ನು ಪಾಲಿಸುವುದಕ್ಕೆ ಅನುಕೂಲವಾಗಲು ರಾಜ್ಯ ಸಾರ್ವಜನಿಕ ಉದ್ದಿಮೆಗಳಲ್ಲಿರುವ ಜನರಲ್ ಮ್ಯಾನೇಜರ್ ಸಿಬ್ಬಂದಿಗೆ ಸಂಬಂಧಿಸಿದ ನಿರ್ದೇಶಕರ ಹುದ್ದೆಗಳನ್ನು ರಾಜ್ಯ ಸರಕಾರದ ಅಧಿಕಾರಿಗಳಿಂದ ತುಂಬಬೇಕು.

4. ಖಾಸಗಿ ಉದ್ಯಮಗಳು ರಾಜ್ಯ ಸರಕಾರದಿಂದ ನೆಲ, ಜಲ, ವಿದ್ಯುತ್ ಮುಂತಾದ ಸೌಲಭ್ಯಗಳನ್ನು ಪಡೆಯುತ್ತಿರುವುದರಿಂದ ಅವುಗಳ ಮೇಲೆ ಒತ್ತಡ ತರಲು ಸಾಧ್ಯವಿದೆ. ಉದ್ಯಮಗಳಲ್ಲಿ ಉನ್ನತ ಮಟ್ಟದ ಆಡಳಿತ ಹುದ್ದೆಗಳನ್ನು ಅವಶ್ಯಬಿದ್ದಲ್ಲಿ ಬಿಟ್ಟು ಉಳಿದ ಎಲ್ಲಾ ಹುದ್ದೆಗಳಿಗೆ ಕನ್ನಡಿಗರನ್ನೇ ನೇಮಿಸುವಂತೆ ಕಡ್ಡಾಯ ಮಾಡಬೇಕು.

ಸಚಿವ ಸಂಪುಟದ ಉಪ ಸಮಿತಿಯು - ರಾಜ್ಯದಲ್ಲಿ ಸ್ಥಾಪಿತವಾಗಿರುವ ಖಾಸಗಿ ಉದ್ದಿಮೆಗಳು ರಾಜ್ಯ ಸರಕಾರದಿಂದ ಪೂರ್ವಭಾವಿ ವ್ಯವಸ್ಥೆ ಸಹಾಯ ಧನವನ್ನು ಪಡೆದಿರುತ್ತವೆ. ಆದುದರಿಂದ ಇವುಗಳು ಉದ್ದಿಮೆಯಲ್ಲಿರುವ ಎಲ್ಲಾ ಹುದ್ದೆಗಳಿಗೆ ಕನ್ನಡಿಗರನ್ನೇ ನೇಮಿಸಿಕೊಳ್ಳಬೇಕು. ರಾಜ್ಯದಲ್ಲಿರುವ ಖಾಸಗಿ ಉದ್ದಿಮೆಗಳಿಗೆ ಕೆ.ಎಸ್. ಐ. ಡಿ. ಸಿ., ಕೆ. ಎಸ್. ಎಫ್. ಸಿ., ಕೆ. ಇ. ಬಿ. ಮುನಿಸಿಪಾಲಿಟಿ, ನೀರು ಮತ್ತು ಒಳಚರಂಡಿ ಮುಂತಾದ ಸಂಸ್ಥೆಗಳು ಸೇವೆಯನ್ನು ಒದಗಿಸುವಾಗ ಈ ಪೂರ್ವ ಷರತ್ತನ್ನು ಹಾಕಬೇಕು.

5. ಉದ್ಯಮಗಳಲ್ಲಿ ಅಪ್ರೆಂಟೀಸಗಳನ್ನು ನೇಮಕ ಮಾಡುವಾಗ ಉದ್ಯೋಗ ವಿನಿಮಯ ಕೇಂದ್ರಗಳ ಮೂಲಕ ಆಯ್ಕೆ ಮಾಡುವಂತೆ ಕೇಂದ್ರ ಮತ್ತು ರಾಜ್ಯ ಸರಕಾರಗಳು ಆದೇಶಗಳನ್ನು ಹೊರಡಿಸಬೇಕು.

ಸಚಿವ ಸಂಪುಟದ ಉಪ ಸಮಿತಿಯು - ರಾಜ್ಯ ಸರಕಾರದ ಆಡಳಿತದಲ್ಲಿರುವ ಉದ್ಯಮಗಳಿಗೆ ಸಂಬಧಿಸಿದಂತೆ ಪ್ರತ್ಯೇಕವಾದ ಪಟ್ಟಿಯನ್ನು ತಯಾರಿಸಬೇಕೆಂದು ತಿಳಿಸಿದೆ.

6. ಕೇಂದ್ರ ಸರಕಾರೀ ವಲಯದ ಉದ್ಯಮಗಳಲ್ಲಿ ಸಿಬ್ಬಂದಿ ಇಲಾಖೆಯಲ್ಲಿ ಮುಖ್ಯಾಧಿಕಾರಿ ಹಾಗೂ ಇತರ ಅಧಿಕಾರಿಗಳಲ್ಲಿ ಹೆಚ್ಚಿನವರು ಕನ್ನಡಿಗರಿರುವಂತೆ ಕೇಂದ್ರ ಸರಕಾರದ ಮೇಲೆ ಒತ್ತಡ ತರಬೇಕು. ಕನ್ನಡಿಗರು ದೊರೆಯದೆ ಇದ್ದಲ್ಲಿ ರಾಜ್ಯ ಸರಕಾರದ ಅಧಿಕಾರಿಗಳನ್ನು ಈ ಹುದ್ದೆಗಳಿಗೆ ಪ್ರತಿನಿಯೋಜನೆಯ ಮೇಲೆ ಪಡೆದು ನೇಮಕ ಮಾಡಬೇಕು ರಾಜ್ಯ ಸರಕಾರೀ ವಲಯದ ಉದ್ಯಮ್ಮಗಳಲ್ಲಿ ಕೂಡ ಇದೇ ಪದ್ಧತಿಯನ್ನು ಅನುಸರಿಸಬೇಕು.

ಸಚಿವ ಸಂಪುಟದ ಉಪ ಸಮಿತಿಯು - ಈ ಶಿಫಾರಸಿನ ಬಗ್ಗೆ ಕಾನೂನು ಇಲಾಖೆಯು ನೀಡಿದ ಅಭಿಪ್ರಾಯವನ್ನು ಪರಿಗಣಿಸಿ ಕೇಂದ್ರ ಸರಕಾರಿ ವಲಯದ ಉದ್ಯಮಗಳ ಬಗ್ಗೆ ಕೇಂದ್ರ ಸರಕಾರಕ್ಕೆ ಪತ್ರ ಬರೆಯಬಹುದೆಂದು ಮತ್ತು ರಾಜ್ಯವಲಯದಲ್ಲಿ ಈ ಶಿಫಾರಸನ್ನು ಅನುಷ್ಠಾನ ಗೊಳಿಸಬಹುದೆಂದು ಶಿಫಾರಸು ಮಾಡಿದೆ.

7. ದಿ ಎಂಪ್ಲಾಯ್ ಮೆಂಟ್ ಎಕ್ಸ್ ಚೇಂಜರ್ಸ್ ( ಕಂಪಲ್ಸರೀ ನೋಟಿಫಿಕೇಷನ್ ಆಫ್ ವೇಕೆನ್ಸೀಸ್ ) ಯ್ಯಾಕ್ಟ್ 1959 – ಈ ಅಧಿನಿಯಮಕ್ಕೆ ಕೆಳಗೆ ನಮೂದಿಸಿದ ತಿದ್ದುಪಡಿ ಮಾಡುವ ವ್ಯವಸ್ಥೆ ಮಾಡಬೇಕು.

(1) ಅಧಿನಿಯಮದ 4ನೇ ಅನುಚ್ಛೇದವನ್ನು ತಿದ್ದುಪಡಿ ಮಾಡಿ ಖಾಲಿ ಹುದ್ದೆಗಳನ್ನು ಅವಶ್ಯವಾಗಿ ಉದ್ಯೋಗ ವಿನಿಮಯ ಕೇಂದ್ರಗಳಿಗೆ ತಿಳಿಸಿದ ಮೇಲೆ ಅಲ್ಲಿ ಹೆಸರು ನೋಂದಾಯಿಸಿದ ಅಭ್ಯರ್ಥಿಗಳನ್ನು ಆಯ್ಕೆ ಮಾಡಿ ನೇಮಕ ಮಾಡುವುದು ಕಡ್ಡಾಯ ಮಾಡಬೇಕು. ರಾಜ್ಯದ ಯಾವುದೇ ಕೇಂದ್ರದಲ್ಲಿ ಅರ್ಹತರಯುಳ್ಳ ಅಭ್ಯರ್ಥಿಗಳು ದೊರೆಯದೆಇದ್ದಲ್ಲಿ ಮಾತ್ರ ಇತರ ಮೂಲಗಳಿಂದ ಅಭ್ಯರ್ಥಿಗಳನ್ನು ಆಯ್ಕೆ ಮಾಡುವ ಅವಕಾಶ ಇರಬೇಕು.

(2) ಅ ಕುಶಲ ಕೆಲಸಗಾರ ಹುದ್ದೆಗಳಿಗೂ ಅಧಿನಿಯಮ ಅನ್ವಯಿಸುವಂತೆ ಮಾಡಲು ಅನುಚ್ಛೇದ 3 (1) (ಡಿ) ಯನ್ನು ತಿದ್ದುಪಡಿ ಮಾಡಬೇಕು.

ಸಚಿವ ಸಂಪುಟದ ಉಪ ಸಮಿತಿಯು - ಈ ಶಿಫಾರಸಿನ ಬಗ್ಗೆ ಕಾನೂನು ಇಲಾಖೆಯು ನೀಡಿದ ಅಭಿಪ್ರಾಯವನ್ನು ಪರಿಗಣಿಸಿ ಈ ಶಿಫಾರಸನ್ನು ಅಂಗೀಕರಿಸಬಹುದೆಂದು ಮತ್ತು ಸಮಿತಿಯು ಶಿಫಾರಸು ಮಾಡಿರುವಂತೆ ಅಧಿನಿಯಮಕ್ಕೆ ಸೂಕ್ತ ತಿದ್ದುಪಡಿ ಮಾಡುವಂತೆ ಕೇಂದ್ರ ಸರಕಾರವನ್ನು ಕೋರಬಹುದೆಂದು ಶಿಫಾರಸು ಮಾಡಿದೆ.

8. ದಿನಾಂಕ : 23 ನೇ ಜುಲೈ 1981 ರ ತನಕ ಉದ್ಯೋಗ ವಿನಿಮಯ ಕೇಂದ್ರಗಳಲ್ಲಿ ಹೆಸರು ನೋದಾಯಿಸಲು ಯಾವ ನಿರ್ಬಂಧನೆಯು ಇಲ್ಲದಿದ್ದುದರಿಂದ ಅನೇಕ ಕನ್ನಡೇತರ ಅಭ್ಯರ್ಥಿಗಳು ಹೆಸರು ನೋದಾಯಿಸಿರುವರು ಉದ್ಯಮಗಳು ಖಾಲಿ ಹುದ್ದೆಗಳಿಗೆ ನೇಮಕ ಮಾಡಲು ಅಭ್ಯರ್ಥಿಗಳ ಪಟ್ಟಿಯನ್ನು ಕೇಳಿದಾಗ ಕೇಂದ್ರಗಳು ಜ್ಯೇಷ್ಠತೆಯ ಮೇಲೆ ಈ ಕನ್ನಡೇತರ ಅಭ್ಯರ್ಥಿಗಳ ಹೆಸರಿನ ಪಟ್ಟಿಯನ್ನು ಕಳುಹಿಸುವುವು ಮತ್ತು ಅವರೇ ಆಯ್ಕೆಗೊಂಡು ನೇಮಕ ಮಾಡಲ್ಪಡುವರು. ಉದೋಗ ವಿನಿಮಯ ಕೇಂದ್ರಗಳೊಡನೆ ಅಭ್ಯರ್ಥಿಗಳ ಪಟ್ಟಿಯನ್ನು ಕೇಳಿವಾಗ ಕನ್ನಡ ಭಾಷಾಜ್ಞಾನವಿರುವ ಅಭ್ಯರ್ಥಿಗಳ ಹೆಸರನ್ನು ಮಾತ್ರ ಕಳುಹಿಸುವಂತೆ ಕೇಳಬೇಕೆಂಬ ಸಲಹೆಗೆ ಕೆಲವು ಪ್ರಮುಖವಾದ ಉದ್ಯಮಗಳು ಒಪ್ಪಿಕೊಂಡಿರುವುವು ಮತ್ತು ಇನ್ನು ಕೆಲವು ಉದ್ಯಮಗಳು ಈ ಸಲಹೆಯನ್ನು ಪರಿಶೀಲಿಸುವುದಾಗಿ ಒಪ್ಪಿಕೊಂಡಿರುವುವು. ಆದುದರಿಂದ ಸರಕಾರಿ ಇಲಾಖೆಗಳು ಹಾಗೂ ಉದ್ಯಮಗಳು ಉದೋಗ ವಿನಿಮಯ ಕೇಂದ್ರಗಳೊಡನೆ ಕನ್ನಡ ಭಾಷಾಜ್ಞಾನವಿರುವ ಪಟ್ಟಿಯನ್ನು ಕೇಳುವಂತೆಯೂ ಕೇಂದ್ರಗಳು ಅಂತಹವರ ಪಟ್ಟಿಯನ್ನು ಕಳುಹಿಸುವಂತೆಯೂ ಆದೇಶಿಸಬೇಕು.

ಸಚಿವ ಸಂಪುಟದ ಉಪ ಸಮಿತಿಯು - ಕಾನೂನು ಇಲಾಖೆಯು ಈ ಶಿಫಾರಸಿನ ಬಗ್ಗೆ ನೀಡಿದ ಶಿಫಾರಸನ್ನು ಕೂಲಂಕುಷವಾಗಿ ಪರಿಶೀಲಿಸಿ ರಾಜ್ಯ ಸರಕಾರದ ಗ್ರೂಪ್ 'ಸಿ' ನೇರ ನೇಮಕಾತಿ ಹುದ್ದೆಗಳಿಗೆ ಅಭ್ಯರ್ಥಿಗಳನ್ನು ಆಯ್ಕೆ ಮಾಡಿ ನೇಮಿಸಿಕೊಳ್ಳುವಾಗ ಕನ್ನಡ ಪರೀಕ್ಷೆಯಲ್ಲಿ ತೇರ್ಗಡೆಯಾಗಬೇಕೆಂಬ ನಿಯಮವನ್ನು ಈಗಾಗಲೇ ರೂಪಿಸಲಾಗಿದೆ. ಇದೇ ನಿಯಮವನ್ನು ರಾಜ್ಯ ಸರಕಾರದ ಉದ್ಯಮಗಳು ಅಳವಡಿಸಿಕೊಳ್ಳುವಂತೆ ಸೂಚನೆಗಳನ್ನು ನೀಡಲು ಶಿಫಾರಸು ಮಾಡಲಾಯಿತು ಗ್ರೂಪ್ 'ಡಿ" ಹುದ್ದೆಗಳಿಗೆ ಸಂಬಂಧಿಸಿದಂತೆ ಕನ್ನಡ ಭಾಷಾ ಜ್ಞಾನವನ್ನು ಕಡ್ಡಾಯ ಗೊಳಿಸುವ ಬಗ್ಗೆ ಕರ್ನಾಟಕ ಸಿವಿಲ್ ಸೇವಾ ( ಸಾಮಾನ್ಯ ನೇಮಕಾತಿ) ನಿಯಾಮಾವಳಿಗಳು 1977 ರ ನಿಯಮ 5 (9) ಕ್ಕೆ ಸೂಕ್ತ ತಿದ್ದುಪಡಿ ಮಾಡುವಂತೆ ಶಿಫಾರಸು ಮಾಡಿದೆ.

9. ಉದೋಗ ವಿನಿಮಯ ಕೇಂದ್ರಗಳಲ್ಲಿನ ಹೆಸರು ನೋಂದಾಯಿಸುವ ಮೊದಲು ಅಭ್ಯರ್ಥಿಗಳು 15 ವರ್ಷಗಳ ಕಾಲ ರಾಜ್ಯದಲ್ಲಿ ವಾಸವಾಗಿದ್ದರೆಂಬುದನ್ನು ರುಜುವಾತುಪಡಿಸಲು ನೋಂದಾಣಿ ಅಧಿಕಾರಿಗಳು ಈ ಕೆಳಗಿನ ದಾಖಲೆಗಳನ್ನು ಪರಿಶೀಲಿಸಬೇಕು : -

(1) ಶಾಲೆಯ ಸರ್ಟಿಫಿಕೇಟ್ - (ಎಸ್ ಎಸ್. ಎಲ್. ಸಿ. ಸರ್ಟಿಫಿಕೇಟ್) ಪ್ರಾಥಮಿಕ ಸರ್ಟಿಫಿಕೇಟ್ )

(2) ಪಡಿತರ ಚೀಟಿ ( ರೇಷನ್ ಕಾರ್ಡ್ )

(3) ಮತದಾರರ ಪಟ್ಟಿ ( ಅದರಲ್ಲಿ ಅಭ್ಯರ್ಥಿಯ ಅಥವಾ ಅವರ ಹೆತ್ತವರ ಸಂರಕ್ಷಕರ ಹೆಸರು ಸೇರಿಸಬೇಕು.)

(4) ಜನ್ಮ ದಾಖಲೆ ( ಬರ್ಥ್ ಸರ್ಟಿಫಿಕೇಟ್ )

ಅಭ್ಯರ್ಥಿಗಳ ಕನ್ನಡ ಭಾಷಾಜ್ಞಾನವನ್ನು ಹೆಸರು ನೋಂದಾಯಿಸುವ ಮೊದಲು ನೋಂದಣಿ ಅಧಿಕಾರಿಗಳು ಸೂಕ್ತ ರೀತಿಯಲ್ಲಿ ಪರೀಕ್ಷಿಸಬೇಕು.

ಸಚಿವ ಸಂಪುಟದ ಉಪ ಸಮಿತಿಯು- ಈ ಶಿಫಾರಸನ್ನು ಅಂಗೀಕರಿಸಿದೆ.

10. ಅನಕ್ಷರಸ್ಥರು ಹೆಸರು ನೋಂದಾಯಿಸಲು ಉದ್ಯೋಗ ವಿನಿಮಯ ಕೇಂದ್ರಗಳಿಗೆ ಬಂದಾಗ ಅವರು ವ್ಯವಹಾರಿಕ ಕನ್ನಡ ಭಾಷೆ ಮಾತನಾಡಲು ಶಕ್ತರಾಗಿದ್ದರೆ ಮತ್ತು 15 ವರ್ಷಗಳಕಾಲ ರಾಜ್ಯದಲ್ಲಿ ವಾಸವಾಗಿದ್ದುದನ್ನು ರುಜುವಾತುಪಡಿಸಿದರೆ ಅವರನ್ನು ನೋಂದಾಯಿಸಬೇಕು.

ಸಚಿವ ಸಂಪುಟದ ಉಪ ಸಮಿತಿಯು - ಈ ಶಿಫಾರಸನ್ನು ಅಂಗೀಕರಿಸಿದೆ.

11. ಅಂಚೆ ಮೂಲಕ ಹೆಸರು ನೋಂದಾಯಿಸುವ ಪದ್ಧತಿಯಲ್ಲಿ ಅಭ್ಯರ್ಥಿಗಳ ಕನ್ನಡ ಭಾಷಾಜ್ಞಾನವನ್ನು ಪರೀಕ್ಷಿಸಲು ಅವಕಾಶವಿರುವುದಿಲ್ಲ, ಆದುದ್ದರಿಂದ ಆಪದ್ಧತಿಯನ್ನು ರದ್ದು ಮಾಡಬೇಕು ಸ್ಪಷ್ಟ ಆಧಾರವಿದ್ದಲ್ಲಿ ಮಾತ್ರ ನೋಂದಾಯಿಸಬೇಕು.

ಸಚಿವ ಸಂಪುಟದ ಉಪ ಸಮಿತಿಯು - ಈ ಶಿಫಾರಸನ್ನು ಅಂಗೀಕರಿಸಿದೆ.

12. ಗ್ರಾಮಾಂತರ ಪ್ರದೇಶದ ಅಭ್ಯರ್ಥಿಗಳಿಗೆ ಜಿಲ್ಲಾ ಕೇಂದ್ರಗಳಲ್ಲಿರುವ ಉದ್ಯೋಗ ವಿನಿಮಯ ಕೇಂದ್ರಗಳಿಗೆ ಬಂದು ಹೆಸರು ನೋಂದಾಯಿಸಲು ಕಷ್ಟವಾಗಿರುವುದರಿಂದ ತಾಲ್ಲೂಕು ಮಟ್ಟದಲ್ಲಿ ಹೆಸರು ನೋಂದಾಯಿಸುವ ವ್ಯವಸ್ಥೆ ಮಾಡಿ ಆ ಹೆಸರುಗಳನ್ನು ಜಿಲ್ಲಾ ಕಚೇರಿಗಳಲ್ಲಿರುವ ರಿಜಿಸ್ಟರುಗಳಲ್ಲಿ ಸೇರಿಸಬೇಕು.

ಸಚಿವ ಸಂಪುಟದ ಉಪ ಸಮಿತಿಯು - ಈ ಪ್ರಸ್ತಾವನೆಯನ್ನು ಒಪ್ಪಿಕೊಂಡಿದೆ. ಆದರೂ ಸಹ ತಾಲ್ಲೂಕು ಮಟ್ಟದಲ್ಲಿ ಹೆಸರುಗಳನ್ನು ನೋಂದಾಯಿಸಲು ಒಬ್ಬ ಸೂಕ್ತ ಅಧಿಕಾರಿಯನ್ನು ನಾಮ ನಿರ್ದೇಶನ ಮಾಡಬೇಕು. ಆದರೆ ಹೊಸ ಕಛೇರಿಯನ್ನು ಸ್ಥಾಪಿಸುವ ಅಗತ್ಯವಿರುವುದಿಲ್ಲ . ಈ ಕೆಲಸವನ್ನು ಬಹುಶ: ಕಂದಾಯ ಇಲಾಖೆಯ ಅಧಿಕಾರಿಗಳು ಮಾಡಬೇಕು.

13. ಉದ್ಯೋಗ ವಿನಿಮಯ ಕೇಂದ್ರಗಳ ಅಧಿಕಾರ ವ್ಯಾಪ್ತಿ ಕ್ಷೀಣಿಸುವುದನ್ನು ತಡೆಗಟ್ಟಲು ಈ ಕೆಳಗಿನ ಕ್ರಮಗಳನ್ನು ತೆಗೆದುಕೊಳ್ಳಬೇಕು : -

(1) ರಾಜ್ಯ ಸರಕಾರದ ಹಾಗೂ ಕೇಂದ್ರ

(2) ಸರಕಾರದ ಉದ್ಯಮಗಳಲ್ಲಿ ದಿನಗೂಲಿ ನೌಕರರನ್ನು ಸಾಂದರ್ಭಿಕ ಕೆಲಸಗಾರರನ್ನು ಹಾಗೂ ಅಪ್ರೆಂಟಿಸಂಗಳನ್ನು ಉದ್ಯೋಗ ವಿನಿಮಯ ಕೇಂದ್ರಗಳ ಮೂಲಕ ಆಯ್ಕೆ ಮಾಡಿ ನೇಮಕ ಮಾಡಬೇಕು.

(3) ಕೇಂದ್ರ ಸಕಾರಿ ಕಚೇರಿಗಳಲ್ಲಿರುವ ಡಿ. ಗುಂಪಿನ ಹುದ್ದೆಗಳಿಗೆ ಉದ್ಯೋಗ ವಿನಿಮಯ ಕೇಂದ್ರಗಳ ಮೂಲಕವೇ ಅಭ್ಯರ್ಥಿಗಳನ್ನು ಆಯ್ಕೆ ಮಾಡುವಂತೆ ಕೇಂದ್ರ ಸರಕಾರವನ್ನು ಕೇಳಿಕೊಳ್ಳಬೇಕು.

(4) ರಾಜ್ಯ ಸರಕಾರಿ ವಲಯದ ಉದ್ಯಮಗಳು ಅಭ್ಯರ್ಥಿಗಳು ದೊರೆಯದೆ ಇದ್ದ ಪ್ರಸಂಗ ಬಿಟ್ಟು ಉಳಿದ ಕಡೆಗಳಲ್ಲಿ ಕಡ್ಡಾಯವಾಗಿ ಉದ್ಯೋಗ ವಿನಿಮಯ ಕೇಂದ್ರಗಳಲ್ಲಿ ಹೆಸರು ನೋಂದಾಯಿಸಿದ ಅಭ್ಯರ್ಥಿಗಳನ್ನು ಆಯ್ಕೆ ಮಾಡುವಂತೆ ಆದೇಶಿಸಬೇಕು.

(5) ಸಿ ಎನ್ ವಿ ಅಧಿನಿಯಮ ಅನ್ವಯಿಸುವ ಖಾಸಗಿ ಉದ್ಯಮಗಳು ಇದೇ ಕ್ರಮವನ್ನು ಅನುಸರಿಸಬೇಕು.

(6) ಉದ್ಯೋಗ ವಿನಿಮಯ ಕೇಂದ್ರಗಳ ಅಧಿಕಾರಿಗಳು ತಮ್ಮ ಈಗಿನ ಜಡ ಮತ್ತು ಉದಾಸೀನ ತುಂಬಿದ ನಿಷ್ಕ್ರಿಯ ಪಾತ್ರವನ್ನು ತೊರೆದು ಸಮಸ್ಯೆ ಪರಿಹಾರದ ಬಗ್ಗೆ ಕರ್ತೃತ್ವ ಶಕ್ತಿಯಿಂದ ಕೆಲಸ ಮಾಡಬೇಕು. ಈ ಕೇಂದ್ರಗಳ ಮೂಲಕ ಉದ್ಯೋಗ ಪಡೆದ ಅಭ್ಯರ್ಥಿಗಳ ಸಂಖ್ಯೆಯೇ ಅಲ್ಲಿನ ಅಧಿಕಾರಿಗಳ ದಕ್ಷತೆಯ ಅಳತೆಗೋಲಾಗಿರಬೇಕು.

ಸಚಿವ ಸಂಪುಟದ ಉಪ ಸಮಿತಿಯು - ಈ ಶಿಫಾರಸಿನಲ್ಲಿರುವ (2) (4) ಮತ್ತು (5) ನೇ ಶಿಫಾರಸನ್ನು ಅಂಗೀಕರಿಸಿದೆ. (3) ನೇ ಶಿಫಾರಸಿನ ಬಗ್ಗೆ ಕೇಂದ್ರ ಸರಕಾರದೊಡನೆ ಸಮಾಲೋಚಿಸಬೇಕೆಂದು ಅಂದುಕೊಂಡಿದೆ.

14. ಕರ್ನಾಟಕದಲ್ಲಿ ಎಸ್, ಎಸ್,ಎಲ್.ಸಿ. ಅಥವಾ ಪದವೀ ಪರೀಕ್ಷೆ ಪಾಸಾದ ಅಭ್ಯರ್ಥಿಗಳು ಮಾತ್ರ ರಾಜ್ಯದಲ್ಲಿರುವ ರಾಷ್ಟ್ರೀಕೃತ ಬ್ಯಾಂಕುಗಳಿಗೆ ನೇಮಕವಾಗಲು ಅರ್ಹರು ಎಂಬುದಾಗಿ ಪರಿಗಣಿಸುವಂತೆ ಬ್ಯಾಂಕು ನೇಮಕಾತಿ ಮಂಡಳಿಗಳಿಗೆ ಸೂಚಿಸಬೇಕು. ಈ ಮಂಡಳಿಗಳ ಜಾಹೀರಾತುಗಳನ್ನು ಕನಿಷ್ಟ ಒಂದು ರಾಜ್ಯ ಮಟ್ಟದ ಪತ್ರಿಕೆಯಲ್ಲಿ ಪ್ರಕಟಿಸಬೇಕು.

ಸಚಿವ ಸಂಪುಟದ ಉಪ ಸಮಿತಿಯು - ಈ ಶಿಫಾರಸಿನ ಬಗ್ಗೆ ಕಾನೂನು ಇಲಾಖೆಯು ನೀಡಿದ ಅಭಿಪ್ರಾಯವನ್ನು ಪರಿಗಣಿಸಿ ಕರ್ನಾಟಕದಲ್ಲಿರುವ ಬ್ಯಾಂಕುಗಳು ಕರ್ನಾಟಕದಲ್ಲಿ ಎಸ್, ಎಸ್,ಎಲ್, ಸಿ. ಅಥವಾ ಪದವೀ ಪರೀಕ್ಷೆ ಪಾಸಾದ ಅಭ್ಯರ್ಥಿಗಳನ್ನು ನೇಮಕ ಮಾಡಿಕೊಳ್ಳುವಂತೆ ಸಂಬಂಧಪಟ್ಟ ಬ್ಯಾಂಕುಗಳಿಗೆ ಶಿಫಾರಸು ಮಾಡಿದೆ.

15. ರಾಜ್ಯದಲ್ಲಿರುವ ಎರಡು ರಾಷ್ಟ್ರೀಕೃತ ಬ್ಯಾಂಕುಗಳ ನೇಮಕಾತಿ ಮಂಡಳಿಗಳು ನಡೆಸುವ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಕನ್ನಡ ಭಾಷಾ ಜ್ಞಾನವನ್ನು ಕುರಿತು ಒಂದು ಪ್ರಶ್ನೆ ಪತ್ರಿಕೆಯನ್ನು ಸೇರಿಸುವಂತೆ ಸಲಹೆ ನೀಡಬೇಕು.

ಸಚಿವ ಸಂಪುಟದ ಉಪ ಸಮಿತಿಯು - ಶಿಫಾರಸುಗಳ ಬಗ್ಗೆ ಕಾನೂನು ಇಲಾಖೆಯು ನೀಡಿದ ಅಭಿಪ್ರಾಯವನ್ನು ಪರಿಗಣಿಸಿ ರಾಜ್ಯದಲ್ಲಿರುವ ಎರಡು ರಾಷ್ಟ್ರೀಕೃತ ಬ್ಯಾಂಕುಗಳ ನೇಮಕಾತಿ ಮಂಡಳಿಗಳು ನಡೆಸುವ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಕನ್ನಡ ಜ್ಞಾನವನ್ನು ಕುರಿತು ಒಂದು ಪ್ರಶ್ನೆ ಪತ್ರಿಕೆಯನ್ನು ಸೇರಿಸುವಂತೆ ಕೇಂದ್ರ ಸರಕಾರಕ್ಕೆ ಶಿಫಾರಸು ಮಾಡಿದೆ.

16. ಈ ಮಂಡಳಿಗಳು ಅರ್ಜಿಗಳನ್ನು ಆಹ್ವಾನಿಸುವ ಜಾಹೀರಾತುಗಳಲ್ಲಿ ಅಭ್ಯರ್ಥಿಗಳಿಗೆ ಕನ್ನಡ ಭಾಷಾ ಜ್ಞಾನ ಅವಶ್ಯವೆಂಬುದಾಗಿ ಸೂಚಿಸಬೇಕು.

ಶಿಫಾರಸುಗಳ ಬಗ್ಗೆ ಕಾನೂನು ಇಲಾಖೆಯು - ನೀಡಿದ ಅಭಿಪ್ರಾಯವನ್ನು ಪರಿಗಣಿಸಿ ರಾಜ್ಯದಲ್ಲಿರುವ ಎರಡು ರಾಷ್ಟ್ರೀಕೃತ ಬ್ಯಾಂಕುಗಳ ನೇಮಕಾತಿ ಮಂಡಳಿಗಳು ನಡೆಸುವ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಕನ್ನಡ ಜ್ಞಾನವನ್ನು ಕುರಿತು ಒಂದು ಪ್ರಶ್ನೆ ಪತ್ರಿಕೆಯನ್ನು ಸೇರಿಸುವಂತೆ ಕೇಂದ್ರ ಸರಕಾರಕ್ಕೆ ಶಿಫಾರಸು ಮಾಡಿದೆ.

17. ಬ್ಯಾಂಕುಗಳಲ್ಲಿ ಕನ್ನಡ ಬಳಕೆಯ ನಾಗರಿಕರ ಅನುಕೂಲತೆಯ ದೃಷ್ಟಿಯಿಂದಲೂ ಕನ್ನಡಿಗರ ನೇಮಕದ ದೃಷ್ಟಿಯಿಂದಲೂ ಇದು ಅವಶ್ಯ ಆದುದ್ದರಿಂದ ರಾಜ್ಯದಲ್ಲಿರುವ ಎಲ್ಲಾ ಬ್ಯಾಂಕುಗಳ ಶಾಖೆಗಳು ಕನ್ನಡದಲ್ಲಿಯೇ ವ್ಯವಹರಿಸುವಂತೆ ಒತ್ತಾಯ ಮಾಡಬೇಕು.

ಸಚಿವ ಸಂಪುಟದ ಉಪ ಸಮಿತಿಯು - ಶಿಫಾರಸುಗಳ ಬಗ್ಗೆ ಕಾನೂನು ಇಲಾಖೆಯು ನೀಡಿದ ಅಭಿಪ್ರಾಯವನ್ನು ಪರಿಗಣಿಸಿ ರಾಜ್ಯದಲ್ಲಿರುವ ಎರಡು ರಾಷ್ಟ್ರೀಕೃತ ಬ್ಯಾಂಕುಗಳ ನೇಮಕಾತಿ ಮಂಡಳಿಗಳು ನಡೆಸುವ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಕನ್ನಡ ಜ್ಞಾನವನ್ನು ಕುರಿತು ಒಂದು ಪ್ರಶ್ನೆ ಪತ್ರಿಕೆಯನ್ನು ಸೇರಿಸುವಂತೆ ಕೇಂದ್ರ ಸರಕಾರಕ್ಕೆ ಶಿಫಾರಸು ಮಾಡಿದೆ.

18. ರಾಜ್ಯದಲ್ಲಿ ಬ್ಯಾಂಕುಗಳ ನೇಮಕಾತಿ ಮಂಡಳಿಗಳನ್ನು ರಚಿಸುವಾಗ ಕೇಂದ್ರ ಸರಕಾರವು ರಾಜ್ಯ ಸರಕಾವನ್ನು ಸಂಪರ್ಕಿಸುವಂತೆಯೂ ಮತ್ತು ಈ ಮಂಡಳಿಗಳ ಸದಸ್ಯರುಗಳಲ್ಲಿ ರಾಜ್ಯ ಸರಕಾರದ ಪ್ರತಿನಿಧಿಯನ್ನು ಸೇರಿಸಿ ಬಹು ಸಂಖ್ಯೆಯಲ್ಲಿ ಕನ್ನಡಿಗರನ್ನೂ ಸೇರಿಸುವಂತೆ ಕೇಂದ್ರ ಸರಕಾರವನ್ನು ರಾಜ್ಯ ಸರಕಾರವು ಒತ್ತಾಯಿಸಬೇಕು.

ಸಚಿವ ಸಂಪುಟದ ಉಪ ಸಮಿತಿಯು - ಶಿಫಾರಸುಗಳ ಬಗ್ಗೆ ಕಾನೂನು ಇಲಾಖೆಯು ನೀಡಿದ ಅಭಿಪ್ರಾಯವನ್ನು ಪರಿಗಣಿಸಿ ರಾಜ್ಯದಲ್ಲಿರುವ ಎರಡು ರಾಷ್ಟ್ರೀಕೃತ ಬ್ಯಾಂಕುಗಳ ನೇಮಕಾತಿ ಮಂಡಳಿಗಳು ನಡೆಸುವ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಕನ್ನಡ ಜ್ಞಾನವನ್ನು ಕುರಿತು ಒಂದು ಪ್ರಶ್ನೆ ಪತ್ರಿಕೆಯನ್ನು ಸೇರಿಸುವಂತೆ ಕೇಂದ್ರ ಸರಕಾರಕ್ಕೆ ಶಿಫಾರಸು ಮಾಡಿದೆ.

19. ಕೆಲವು ಕೇಂದ್ರ ಸರಕಾರಿ ಇಲಾಖೆಗಳು ದೈಹಿಕ ಶ್ರಮದ ಹಾಗೂ ದಿನಗೂಲಿ ಕೆಲಸಗಳಿಗೆ ಉದ್ಯೋಗ ವಿನಿಮಯ ಕೇಂದ್ರಗಳನ್ನು ಸಂಪರ್ಕಿಸದೆ ಕನ್ನಡೇತರರನ್ನು ನೇರವಾಗಿ ನೇಮಕ ಮಾಡಿ ಕೆಲವು ತಿಂಗಳ ನಂತರ ಅವರ ಸೇವೆಯನ್ನು ಖಾಯಂಗೊಳಿಸುವರು. ಇಂತಹ ಹುದ್ದೆಗಳಿಗೆ ಅಭ್ಯರ್ಥಿಗಳನ್ನು ಉದ್ಯೋಗ ವಿನಿಮಯ ಕೇಂದ್ರಗಳ ಮೂಲಕ ಆಯ್ಕೆ ಮಾಡುವಂತೆ ಒತ್ತಾಯಿಸಬೇಕು.

ಸಚಿವ ಸಂಪುಟದ ಉಪ ಸಮಿತಿಯು - ಈ ಶಿಫಾರಸನ್ನು 13 ನೇ ಶಿಫಾರಸನ್ನು ಪರಿಶೀಲಿಸುವಾಗ ಪರಿಗಣಿಸಿ ಶಿಫಾರಸು ಮಾಡಿದೆ.

20. ಮಾಜಿ ಸೈನಿಕರಿಗೆ ಹಾಗೂ ಪರಿಶಿಷ್ಟ ಜಾತಿ / ಬುಡಕಟ್ಟನವರಿಗೆ ಮೀಸಲಾಗಿರಿಸಿದ ಹುದ್ದೆಗಳಿಗೆ ಕನ್ನಡೇತರರು ಆಯ್ಕೆಯಾಗುವುದನ್ನು ತಡೆಗಟ್ಟಲು ರಾಜ್ಯ ಸರಕಾರದ ಇಲಾಖೆಗಳಲ್ಲಿ ಮತ್ತು ಎಲ್ಲಾ ಉದ್ಯಮಗಳಲ್ಲಿ ನೇಮಕಗೊಳ್ಳುವ ಅಭ್ಯರ್ಥಿಗಳಿಗೆ ಕನ್ನಡ ಭಾಷಾ ಜ್ಞಾನ ಅವಶ್ಯವೆಂಬ ನಿಯಮವನ್ನು ರೂಪಿಸಬೇಕು.

ಸಚಿವ ಸಂಪುಟದ ಉಪ ಸಮಿತಿಯು - ಈ ಶಿಫಾರಸಿನ ಬಗ್ಗೆ ಕಾನೂನು ಇಲಾಖೆಯು ನೀಡಿದ ಅಭಿಪ್ರಾಯವನ್ನು ಪರಿಗಣಿಸಿ ರಾಜ್ಯ ಸರಕಾರದ ಎಲ್ಲಾ ಇಲಾಖೆಗಳಲ್ಲಿ ಮತ್ತು ಎಲ್ಲಾ ಉದ್ಯಮಗಳಲ್ಲಿ ನೇಮಕಗೊಳ್ಳುವ ಅಭ್ಯರ್ಥಿಗಳಿಗೆ ಕನ್ನಡ ಭಾಷಾಜ್ಞಾನ ಅವಶ್ಯವೆಂಬ ನಿಯಮವನ್ನು ನೇಮಕಾತಿ ನಿಯಮಗಳಲ್ಲಿ ರೂಪಿಸಬೇಕೆಂದು ಶಿಫಾರಸ್ಸು ಮಾಡಿದೆ.

21. ರಾಜ್ಯದಲ್ಲಿರುವ ಕೆಲವು ತಾಂತ್ರಿಕ ಮತ್ತು ಇತರ ತರಬೇತಿ ಕೇಂದ್ರಗಳಲ್ಲಿ ಪ್ರವೇಶಕೊಡುವಾಗ ಪರಪ್ರಾಂತ್ಯದ ಅಭ್ಯರ್ಥಿಗಳಿಗೆ ಆದ್ಯತೆ ಕೊಡುತ್ತರುವುದು ಮತ್ತು ಅದರಿಂದ ಅವರಿಗೆ ಉದ್ಯೋಗಾವಕಾಶ ದೊರೆತು ಕನ್ನಡಿಗರ ಉದ್ಯೋಗಾವಕಾಶಕ್ಕೆ ಧಕ್ಕೆ ಉಂಟಾಗುತ್ತಿರುವುದು ಸಮಿತಿ ಗಮನಕ್ಕೆ ಬಂದಿದೆ ಆದುದರಿಂದ ಈ ತರಬೇತಿ ಕೇಂದ್ರಗಳಲ್ಲಿ ಪ್ರವೇಶ ಕನ್ನಡಿಗರಿಗೆ ಮಾತ್ರ ಸೀಮಿತಗೊಳಿಸಬೇಕು. ಅನಿವಾರ್ಯ ಪ್ರಸಂಗಗಳಲ್ಲಿ ಪರ ಪ್ರಾಂತ್ಯದವರಿಗೆ ಪ್ರವೇಶ ಕೊಟ್ಟರೂ ಅದು ನೂರಕ್ಕೆ 5 ಕ್ಕಿಂತ ಹೆಚ್ಚಿರಬಾರದು.

ಸಚಿವ ಸಂಪುಟದ ಉಪ ಸಮಿತಿಯು - ಈ ಬಗ್ಗೆ ಕೇಂದ್ರ ಸರಕಾರದ ಸ್ವಾಮ್ಯದ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಬೇಕು. ರಾಜ್ಯ ಸರಕಾರದ ಸ್ವಾಮ್ಯದ ಸಂಸ್ಥೆಗಳ ಬಗ್ಗೆ ಈ ಶಿಫಾರಸನ್ನು ಜಾರಿಗೊಳಿಸುವಂತೆ ಶಿಫಾರಸನ್ನು ಮಾಡಿದೆ.

21 (ಅ) ಸರಕಾರ ಆದೇಶ ಸಂಖ್ಯೆ ಸಿಐ 121 ಎಸ್ ಪಿ ಸಿ 82, ದಿನಾಂಕ 30 ನೇ ಆಕ್ಟೋಬರ್ 1982 – ಇದರಲ್ಲಿ ಹೊಸ ಕೈಗಾರಿಕಾ ಬಂಡವಾಳ ಹೂಡಿಕೆಗೆ ಆಕರ್ಷಣೆಯಾಗಿ ಪರಿಷ್ಕೃತ ಪ್ರೋತ್ಸಾಹ ಹಾಗೂ ರಿಯಾಯಿತಿಗಳನ್ನು ಘೋಷಿಸಿದೆ ಈ ಪ್ರೋತ್ಸಾಹ ರಿಯಾಯಿತಿಗಳನ್ನು ಕೊಡುವಾಗ ಕನ್ನಡಿಗರಿಗೆ ಆದ್ಯತೆ ಕೊಡುವಂತೆ ಆದೇಶಿಸಬೇಕು ಮತ್ತು ಸರಕಾರದ ನೆರವನ್ನು ಪಡೆದು ಸ್ಥಾಪಿಸಲಾಗುವ ಕೈಗಾರಿಕೆಗಳು ಕನ್ನಡಿಗರಿಗೇ ಉದೋಗಾವಕಾಶವನ್ನು ಕೊಡಬೇಕೆಂಬ ಕರಾರನ್ನು ಹಾಕಬೇಕು.

ಸಚಿವ ಸಂಪುಟದ ಉಪ ಸಮಿತಿಯು - ಈ ಶಿಫಾರಸಿನ ಬಗ್ಗೆ ಕಾನೂನು ಇಲಾಖೆಯು ನೀಡಿದ ಅಭಿಪ್ರಾಯದ ಮೇರೆಗೆ ಕೈಗಾರಿಕೆಗಳನ್ನು ಸ್ಥಾಪಿಸುವಾಗ ಹಾಗೂ ಅವುಗಳಿಗೆ ರಿಯಾಯತಿ ನೀಡುವ ಸಂದರ್ಭದಲ್ಲಿ ಕನ್ನಡಿಗರಿಗೆ ಆದ್ಯತೆಯನ್ನು ಕೊಡುವಂತೆ

ಹಾಗೂ ಸರಕಾರದ ನೆರವನ್ನು ಪಡೆದು ಸ್ಥಾಪಿಸಲಾಗುವ ಕೈಗಾರಿಕೆಗಳನ್ನು ಕನ್ನಡಿಗರಿಗೆ ಉದ್ಯೋಗಾವಕಾಶವನ್ನು ಕೊಡಬೇಕೆಂಬ ಕರಾರನ್ನು ಹಾಕಬೇಕೆಂಬ ಶಿಫಾರಸನ್ನು ಒಪ್ಪಿದೆ.

22. ಹಿಂದೆ ಕೇಂದ್ರ ಸರಕಾರವು ( ಸಂವಿಧಾನದ ಅನುಚ್ಛೇದ 16 ರ ಉಪವಾಕ್ಯ (3) ರ ಆಧಾರದ ಮೇರೆ "The Public Employment ( Requirement as to Residence) Act 1957 " ಎಂಬ ಕಾಯಿದೆಯನ್ನು ರಚಿಸಿತ್ತು. ಇದರಂತೆ ಕಾಯಿದೆ ಅನ್ವಯಿಸುವ ಆಂಧ್ರ ಪ್ರದೇಶ ಇತ್ಯಾದಿ ರಾಜ್ಯಗಳಲ್ಲಿ ಕೆಲವು ಹುದ್ದೆಗಳಿಗೆ ನೇಮಕಮಾಡಲ್ಪಡುವ ಅಭ್ಯರ್ಥಿಗಳು ಆಯಾಯಾ ರಾಜ್ಯಗಳಲ್ಲಿ ವಾಸವಾಗಿದ್ದಿರಬೇಕೆಂಬ ನಿಯಮಗಳನ್ನು ರಚಿಸಲು ಕೇಂದ್ರ ಸರಕಾರಕ್ಕೆ ಅಧಿಕಾರವನ್ನು ಕೊಡಲಾಗಿತ್ತು. ಈಗ ಕರ್ನಾಟಕದ ಪರವಾಗಿ ಇದೇ ರೀತಿಯ ಕಾಯಿದೆಯನ್ನು ರಚಿಸಬೇಕೆಂದು ಕೇಂದ್ರ ಸರಕಾರವನ್ನು ಕೇಳಿಕೊಳ್ಳಬೇಕು. ಈ ಕಾಯಿದೆಯ ಕಾಲಾವಧಿ ಪ್ರಥಮ ಹಂತದಲ್ಲಿ 10 ವರ್ಷಗಳಾಗಿರಬೇಕು.

23. ಉದ್ಯಮಗಳ ಸ್ಥಾಪನೆಗಾಗಿ ಜಮೀನನ್ನು ಕಳೆದುಕೊಂಡವರಿಗೆ ಪರಿಹಾರ ದೊರೆಯುಂವಂತೆ ಮಾಡಲು ನಿಗದಿಪಡಿಸಿದ ಸಮಯದೊಳಗೆ ಉದ್ಯಮಗಳನ್ನು ಕಡ್ಡಾಯವಾಗಿ ಸ್ಥಾಪಿಸುವ ಮತ್ತು ಜಮೀನು ಕಳೆದುಕೊಂಡ ಪ್ರತಿ ಕುಟುಂಬಕ್ಕೆ ಸೇರಿದ ಕನಿಷ್ಟ ಒಬ್ಬ ಸದಸ್ಯರಿಗೆ ಉದ್ಯೋಗಾವಕಾಶವನ್ನು ಕೊಡುವ ವ್ಯವಸ್ಥೆಯನ್ನು ಮಾಡಬೇಕು. ಹೆಚ್ಚು ಪ್ರಮಾಣದಲ್ಲಿ ಭೂಮಿಯನ್ನು ಕಳೆದುಕೊಂಡವರಿಗೆ ಸಂದರ್ಭಕ್ಕೆ ಅನುಸಾರವಾಗಿ ಒಂದಕ್ಕಿಂತ ಹೆಚ್ಚು ಹುದ್ದೆಗಳನ್ನು ಒದಗಿಸತಕ್ಕದ್ದು.

ಸಚಿವ ಸಂಪುಟದ ಉಪ ಸಮಿತಿಯು - ಜಮೀನು ಕಳೆದುಕೊಂಡ ಪ್ರತಿ ಕುಟುಂಬಕ್ಕೆ ಸೇರಿದ ಕನಿಷ್ಟ ಒಬ್ಬ ಸದಸ್ಯರಿಗೆ ಉದ್ಯೋಗಾವಕಾಶವನ್ನು ಕೊಡುವ ವ್ಯವಸ್ಥೆಯನ್ನು ಮಾಡಬೇಕು. ಮತ್ತು ಹೆಚ್ಚು ಪ್ರಮಾಣದಲ್ಲಿ ಭೂಮಿ ಕಳೆದುಕೊಂಡವರಿಗೆ ಸಂದರ್ಭಕ್ಕನುಸಾರವಾಗಿ ಒಂದಕ್ಕಿಂತ ಹೆಚ್ಚು ಹುದ್ದೆಗಳನ್ನು ನೀಡಬೇಕೆಂದು ಶಿಫಾರಸು ಮಾಡಿದೆ.

24. ನೂರಕ್ಕಿಂತ ಹೆಚ್ಚಿನ ಸಂಖ್ಯೆಯ ನೌಕರರು ಇರುವ ಖಾಸಗಿ ಉದ್ಯಮಗಳ ನೇಮಕಾತಿ ಸಮಿತಿಗಳಲ್ಲಿ ರಾಜ್ಯ ಸರಕಾರದ ಪ್ರತಿನಿಧಿಯನ್ನು ಸೇರಿಸುವಂತೆ ಉದ್ಯಮಿಗಳನ್ನು ಒತ್ತಾಯಿಸಬೇಕು.

ಸಚಿವ ಸಂಪುಟದ ಉಪ ಸಮಿತಿಯು - ಈ ಶಿಫಾರಸನ್ನು ಒಪ್ಪಿಕೊಂಡಿದೆ.

25. ಉದ್ಯಮಗಳ ನೇಮಕಾತಿ ಸಮಿತಿಗಳಲ್ಲಿರುವ ರಾಜ್ಯ ಸರಕಾರದ ಪ್ರತಿನಿಧಿಗಳು ಈ ಸಮಿತಿಗಳ ನಡವಳಿಕೆಗಳ ಬಗ್ಗೆ ಸರಕಾರಕ್ಕೆ ವರದಿಗಳನ್ನು ಕಳುಹಿಸುವಂತೆಯೂ ಈ ವರದಿಗಳ ಪರಿಶೀಲನೆಗೆ ಒಂದು ಘಟಕವನ್ನು ರಚಿಸುವಂತೆಯೂ ವ್ಯವಸ್ಥೆ ಮಾಡಬೇಕು. ಈ ಘಟಕಕ್ಕೆ ಶಾಸನಬದ್ಧ ಅಂತಸ್ತು ದೊರೆಯುವಂತೆ ಮಾಡುವ ವ್ಯವಸ್ಥೆ ಮಾಡಬೇಕು. ಅವಶ್ಯವಿದ್ದರೆ ವಿಭಾಗಮಟ್ಟದಲ್ಲಿ ಸಹ ಈ ಘಟಕಗಳ ಶಾಖೆಗಳು ಪರಿಶೀಲನೆ ನಡೆಸುವಂತೆ ಮಾಡಬಹುದು.

ಸಚಿವ ಸಂಪುಟದ ಉಪ ಸಮಿತಿಯು - ಈ ಶಿಫಾರಸನ್ನು ಒಪ್ಪಿಕೊಂಡಿದೆ.

26. ಉದ್ಯಮಗಳಲ್ಲಿ ನೌಕರರ ಮಕ್ಕಳಿಗೆ ಆದ್ಯತೆ ಮೇಲೆ ನೇಮಕ ಮಾಡುವುದರಿಂದ ಕನ್ನಡೇತರರು ಬಹು ಸಂಖ್ಯೆಯಲ್ಲಿರುವ ಉದ್ಯಮಗಳಲ್ಲಿ ಕನ್ನಡಿಗರ ಸಂಖ್ಯೆಯನ್ನು ಹೆಚ್ಚಿಸುವ ಸಾಧ್ಯತೆ ಇರುವುದಿಲ್ಲ ಮತ್ತು ಅರ್ಹರಾಯಿರುವ ಅಭ್ಯರ್ಥಿಗಳಿಗೆ ಉದ್ಯೋಗಾವಕಾಶ ಸರಿಸಮಾನವಾದ ಅವಕಾಶ ಕೊಟ್ಟಂತಾಗುವುದಿಲ್ಲ. ಆದುದರಿಂದ ಈ ಪದ್ಧತಿಯನ್ನು ರದ್ದು ಮಾಡಬೇಕು.

ಸಚಿವ ಸಂಪುಟದ ಉಪ ಸಮಿತಿಯು -------------

27. ಉದ್ಯಮಗಳಲಿರುವ ಸ್ಥಳೀಯ ನೌಕರರ ಬೇಸಾಯದ ಕೆಲಸ ಆರಂಭವಾದಾಗ ಇಎಸ್ ಐ ಸಂಸ್ಥೆಯು ಕೊಡುವ ವೈದ್ಯಕೀಯ ಸರ್ಟಿಫಿಕೇಟಿನ ಸೌಲಭ್ಯವನ್ನು ದುರುಪಯೋಗಪಡಿಸಿಕೊಂಡು ಹೆಚ್ಚಿನ ಸಂಖ್ಯೆಯಲ್ಲಿ ಗೈರುಹಾಜರಿಯಾಗುವುದರಿಂದ ಅವರ ನೇಮಕಕ್ಕೆ ಧಕ್ಕೆ ಉಂಟಾಗಿದೆ. ಇದನ್ನು ತಡೆಗಟ್ಟಲು ಪ್ರಾಮಾಣಿಕವಾಗಿ ಕಾರ್ಯನಿರ್ವಹಿಸುವಂತೆ ಕಟ್ಟುನಿಟ್ಟಾದ ನಿರ್ದೇಶನವನ್ನು ಕೊಡಬೇಕು.

ಸಚಿವ ಸಂಪುಟದ ಉಪ ಸಮಿತಿಯು -------------

28. ಮಹಾರಾಷ್ಟ್ರದಲ್ಲಿರುವ ಪದ್ಧತಿಯಂತೆ ಉದ್ಯಮಗಳಿಂದ ಕನ್ನಡಿಗರಿಗೆ ನಿಗದಿಪಡಿಸಿದ ಪ್ರಮಾಣದಲ್ಲಿ ಉದ್ಯೋಗಾವಕಾಶವನ್ನು ಒದಗಿಸುವ ಬಗ್ಗೆ ಪ್ರತಿವರ್ಷ ಘೋಷಣೆ ಪ್ರ ಪತ್ರವನ್ನು ( ಡಿಕ್ಲೆರೇಷನ್ ) ಪಡೆಯಬೇಕು. ಈ ಪ್ರ ಪತ್ರವನ್ನು ಪಡೆಯುವ ವಂಶ ಪರಿಶೀಲಿಸುವ ಜವಾಬ್ದಾರಿಕೆಯನ್ನು ಕ್ರಮ ಸಂಖ್ಯೆ 25ನೇ ಶಿಫಾರಸ್ಸಿನಲ್ಲಿ ಸೂಚಿಸಿರುವ ಘಟಕಕ್ಕೆ ವಹಿಸಿಕೊಡಬೇಕು.

ಸಚಿವ ಸಂಪುಟದ ಉಪ ಸಮಿತಿಯು - ಈ ಶಿಫಾರಸನ್ನು ಒಪ್ಪಿಕೊಂಡಿದೆ.

29. ಗುಲ್ಬರ್ಗಾ ಜಿಲ್ಲೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಸಿಮೆಂಟ್ ಉದ್ಯಮಗಳು ಸ್ಥಾಪಿತವಾಗುತ್ತಿರುವುವು. ಆದ್ದರಿಂದ ಇಲ್ಲಿ ಸಿಮೆಂಟ್ ಉದ್ಯಮಕ್ಕೆ ಸಂಬಂಧಪಟ್ಟ ತಾಂತ್ರಿಕ ವಿಷಯಗಳಲ್ಲಿ ತರಬೇತಿ ಕೊಡುವ ಏರ್ಪಾಡು ಉಳ್ಳ ಸಂಸ್ಥೆಯನ್ನು ತೆರೆಯಬೇಕು.

ಸಚಿವ ಸಂಪುಟದ ಉಪ ಸಮಿತಿಯು - ಈ ಶಿಫಾರಸನ್ನು ಒಪ್ಪಿಕೊಂಡಿದೆ.

30. ಅಲ್ಲಿಲರಿ ಕೈಗಾರಿಕೆಗಳ ಸ್ಥಾಪನೆಗೆ ಅನುಮತಿ ನೀಡುವಾಗ ಕನ್ನಡಿಗರಿಗೆ ಪ್ರೋತ್ಸಾಹ ಕೊಡುವಂತೆ ಕ್ರಮ ತೆಗೆದುಕೊಳ್ಳಬೇಕು.

ಸಚಿವ ಸಂಪುಟದ ಉಪ ಸಮಿತಿಯು - ಈ ಶಿಫಾರಸನ್ನು ಒಪ್ಪಿಕೊಂಡಿದೆ.

31. ಉದ್ಯಮಗಳ ಸ್ಥಾಪನೆ ಮತ್ತು ವಿಸ್ತರಣೆ ಪ್ರಸ್ತಾಪ ಬಂದಾಗ ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆಯೂ ಮತ್ತು ಉದ್ಯಮಗಳಿಗೆ ಆರ್ಥಿಕ ನೆರವನ್ನು ಒದಗಿಸಿದಾಗ ಕರ್ನಾಟಕ ರಾಜ್ಯ ಆರ್ಥಿಕ ನಿಗಮವೂ ಉದ್ಯೋಗ ವಿನಿಮಯ ಕೇಂದ್ರಗಳಿಗೆ ತಿಳಿಸಬೇಕು. ಈ ಕೇಂದ್ರಗಳು ತಮ್ಮಲ್ಲಿ ಹೆಸರು ನೋಂದಾಯಿಸಿದ ಅಭ್ಯರ್ಥಿಗಳ ನೇಮಕಕ್ಕೆ ಪ್ರಯತ್ನಿಸಬೇಕು.

ಸಚಿವ ಸಂಪುಟದ ಉಪ ಸಮಿತಿಯು - ಈ ಶಿಫಾರಸನ್ನು ಒಪ್ಪಿಕೊಂಡಿದೆ.

32. ಕನ್ನಡಿಗರ ನಾನ್ – ರೆಸಿಡೆಂಟ್ ಆಕೌಂಟಿನಲ್ಲಿರುವ ಠೇವಣಿಯನ್ನು ಕನ್ನಡಿಗರಿಗೆ ನೇಮಕ ಮಾಡಬೇಕೆಂಬ ಶರತ್ತಿನ ಮೇಲೆ ಉದ್ಯಮಗಳ ಸ್ಥಾಪನೆಗಾಗಿ ಉಪಯೋಗಿಸಲು ಒಪ್ಪಿಗೆ ಕೊಡುವಂತೆ ರಾಜ್ಯ ಸರಕಾರವು ಕೇಂದ್ರ ಸರಕಾರಕ್ಕೆ ಶಿಫಾರಸು ಮಾಡಬೇಕು.

ಸಚಿವ ಸಂಪುಟದ ಉಪ ಸಮಿತಿಯು ---------------

33. ಸರ್ಕಾರದಲ್ಲಿರುವ ಮುಖ್ಯವಾದ ಸ್ಥಾನಗಳಿಗೆ ಅಧಿಕಾರಿಗಳನ್ನು ನೇಮಿಸುವಾಗ ಕನ್ನಡಿಗರ ಬಗ್ಗೆ ಕಳಕಳಿಯಿಂದ ಅಥವಾ ಅದರ ಅಭಿವೃದ್ಧಿ ಬಗ್ಗೆ ಆಸಕ್ತಿ ವಹಿಸುವ ಮನೋಭಾವ ಇರುವ ಅಧಿಕಾರಿಗಳನ್ನೂ ಆಯ್ಕೆಮಾಡಿ ನೇಮಕ ಮಾಡಬೇಕು.

ಸಚಿವ ಸಂಪುಟದ ಉಪ ಸಮಿತಿಯು - ಇದೊಂದು ಸರಕಾರಕ್ಕೆ ಮಾರ್ಗದರ್ಶಿ ಎಂದು ಹೇಳಿದೆ.

34. ಸರಕಾರದ ಅಧಿಕೃತ ಜ್ಞಾಪನ ಪತ್ರ ಡಿಪಿಎಆರ್ 38 ಎಸ್ ಸಿ ಆರ್ 83 ದಿನಾಂಕ 20 ನೇ ಜುಲೈ 1983 ಇದರಂತೆ ಸಂದರ್ಶನ ಕಾಲದಲ್ಲಿ ಅಭ್ಯರ್ಥಿಗಳನ್ನು ಸಾಧ್ಯವಾದಷ್ಟು ಮಟ್ಟಿಗೆ ಕನ್ನಡದಲ್ಲಿಯೇ ಪ್ರಶ್ನಿಸಿ ಉತ್ತರವನ್ನು ಪಡೆಯಬೇಕೆಂದಿರುವುದು ಇದನ್ನು ತಿದ್ದುಪಡಿಮಾಡಿ ಕನ್ನಡದಲ್ಲಿಯೇ ಪ್ರಶ್ನಿಸಿ ಉತ್ತರ ಪಡೆಯುವ ವ್ಯವಸ್ಥೆ ಮಾಡಬೇಕು.

ಸಚಿವ ಸಂಪುಟದ ಉಪ ಸಮಿತಿಯು - ಈ ಶಿಫಾರಸನ್ನು ಒಪ್ಪಿಕೊಂಡಿದೆ.

35. ಅಭ್ಯರ್ಥಿಗಳ ಆಯ್ಕೆಗಾಗಿ ಲೋಕಸೇವಾ ಆಯೋಗ ಅಥವಾ ಇತರ ನೇಮಕಾತಿ ಸಮಿತಿಗಳು ನಡೆಸುವ ಎಲ್ಲಾ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಒಂದು ಕನ್ನಡ ಪ್ರಶ್ನೆ ಪತ್ರಿಕೆಯನ್ನೂ ಕಡ್ಡಾಯವಾಗಿ ಸೇರಿಸಬೇಕು. ಈ ಕನ್ನಡ ಪ್ರಶ್ನೆ ಪತ್ರಿಕೆಯಲ್ಲಿ ಉತ್ತೀರ್ಣರಾಗದೆ ಇರುವವರು ಆಯ್ಕೆಗೆ ಅನರ್ಹರಾಗುವಂತೆ ನಿಯಮಗಳಲ್ಲಿ ತಿದ್ದುಪಡಿ ಮಾಡಬೇಕು.

ಸಚಿವ ಸಂಪುಟದ ಉಪ ಸಮಿತಿಯು - ಈ ಶಿಫಾರಸನ್ನು ಒಪ್ಪಿಕೊಂಡಿದೆ.

36. ಸ್ಪರ್ಧಾತ್ಮಕ ಪರೀಕ್ಷೆ ಇಲ್ಲದ ಬರೀ ಸಂದರ್ಶನದ ಮೂಲಕ ಆಯ್ಕೆ ಮಾಡಲಾಗುವುದು ಅಭ್ಯರ್ಥಿಗಳಿಗೆ ಲೋಕಸೇವಾ ಆಯೋಗವು ಕನ್ನಡ ಪರೀಕ್ಷೆಯನ್ನು ನಡೆಸಬೇಕು.

ಸಚಿವ ಸಂಪುಟದ ಉಪ ಸಮಿತಿಯು - ಈ ಶಿಫಾರಸನ್ನು ಒಪ್ಪಿಕೊಂಡಿದೆ.

37. ಪರಿಶಿಷ್ಟ ಜಾತಿ ಬುಡಕಟ್ಟಿಗೆ ಸೇರಿದ ಅಭ್ಯರ್ಥಿಗಳ ಕೊರತೆಯನ್ನು ನೀಗಿಸಲು ಈ ಕೆಳಗಿನ ಕ್ರಮಗಳನ್ನು ತೆಗೆದುಕೊಳ್ಳಬೇಕು.

(1) ಉದ್ಯೋಗ ವಿನಿಮಯ ಕೇಂದ್ರಗಳಲ್ಲಿ ಅಭ್ಯರ್ಥಿಗಳು ದೊರೆಯದೆ ಇದ್ದರೆ ವೃತ್ತ ಪತ್ರಿಕೆಗಳಲ್ಲಿ ಜಾಹೀರಾತು ಪ್ರಕಟಿಸುವುದರ ಮೂಲಕ ಪರಿಶಿಷ್ಟ ಜಾತಿ ಬುಡಕಟ್ಟಿನವರು ಕಲ್ಯಾಣ ಇಲಾಖೆಯ ಗಮನಕ್ಕೆ ತರುವುದರ ಮೂಲಕ ಮತ್ತು ಆಕಾಶವಾಣಿ ದೂರದರ್ಶನಗಳಲ್ಲಿ ಪ್ರಕಟಿಸುವುದರ ಮೂಲಕ ಅಭ್ಯರ್ಥಿಗಳನ್ನು ಪಡೆಯುವ ಪ್ರಯತ್ನ ಮಾಡಬೇಕು.

(2) ಎಲ್ಲಾ ಇಲಾಖೆ ಉದ್ಯಮಗಳಲ್ಲಿರುವ ನೇಮಕಾತಿ ಸಮಿತಿಗಳಲ್ಲಿ ಪರಿಶಿಷ್ಟ ಜಾತಿ ಬುಡಕಟ್ಟಿನವರ ಕಲ್ಯಾಣ ಇಲಾಖೆಯ ಪ್ರತಿನಿಧಿಯನ್ನು ಸೇರಿಸಬೇಕು.

(3) ಈ ಅಭ್ಯರ್ಥಿಗಳು ಸಾಕಷ್ಟು ಸಂಖ್ಯೆಯಲ್ಲಿ ದೊರೆಯದೆ ಇದ್ದಾಗ ಪರಿಶಿಷ್ಟ ಜಾತಿ ಬುಡಕಟ್ಟಿನವರ ಕಲ್ಯಾಣ ನಿರ್ದೇಶಕರನ್ನು ಸಂಪರ್ಕಿಸುವಂತೆ ಉದ್ಯಮಗಳಿಗೆ ಸ್ಥಾಯಿ ಆದೇಶವನ್ನು ಕೊಡಬೇಕು.

(4) ಇಲಾಖೆಯು ಜಾಹೀರಾತುಗಳನ್ನು ಗಮನಿಸಿ ಇಲಾಖೆಯಲ್ಲಿ ಹೆಸರು ನೋಂದಾಯಿಸಿದ ಸೂಕ್ತ ಅರ್ಹತೆಯಿರುವ ಅಭ್ಯರ್ಥಿಗಳಿಗೆ ಅರ್ಜಿ ಸಲ್ಲಿಸುವಂತೆ ಮಾರ್ಗದರ್ಶನ ನೀಡಬೇಕು.

ಸಚಿವ ಸಂಪುಟದ ಉಪ ಸಮಿತಿಯು ---------------

೩೮. ನೀರಾವರಿ ಯೋಜನೆಗಳಲ್ಲಿ ಭಾರಿ ಕಾಮಗಾರಿಗಳಿಗೆ ಗುತ್ತಿಗೆ ಕೊಡುವಾಗ ಕನ್ನಡಿಗರಿಗೆ ಆದ್ಯತೆ ಕೊಡಬೇಕು. ಗುತ್ತಿಗೆ ಕೊಡುವಾಗ ಕನ್ನಡಿಗರನ್ನೇ ಕೆಲಸಗಾರರನ್ನಾಗಿ ನೇಮಕ ಮಾಡಬೇಕೆಂಬ ಷರತ್ತನ್ನು ಒಪ್ಪಂದದಲ್ಲಿ ಸೇರಿಸಬೇಕು.

ಸಚಿವ ಸಂಪುಟದ ಉಪ ಸಮಿತಿಯು ---------------

೩೯. ನೀರಾವರಿ ಅಚ್ಚುಕಟ್ಟು ಪ್ರದೇಶಗಳಲ್ಲಿ ಹಿಡುವಳಿದಾರರು ತಮ್ಮ ಜಮೀನನ್ನು ಹೊರ ರಾಜ್ಯದವರಿಗೆ ವಿಕ್ರಯಿಸಿ ಈ ಯೋಜನೆಗಳ ಲಾಭವನ್ನು ಕಳೆದುಕೊಳ್ಳುವರು ಇದನ್ನು ತಡೆಗಟ್ಟಲು ಜಮೀನನ್ನು ಪರಭಾರೆ ಮಾಡುವುದನ್ನು ನಿಯಂತ್ರಣಗೊಳಿಸಬೇಕು ಈ ಬಗ್ಗೆ ಮಹಾರಾಷ್ಟ್ರದಲ್ಲಿ ಜಾರಿಯಲ್ಲಿರುವ "The Maharashtra Resettlement of Project Displaced Persons Act ,1976 ಇದರ ಮಾದರಿಯನ್ನು ಅನುಸರಿಸಬಹುದು. ಎರಡನೆಯದಾಗಿ ಸರಕಾರ ಅಚ್ಚುಕಟ್ಟು ಪ್ರದೇಶದಲ್ಲಿರುವ ಸಣ್ಣ ಹಿಡುವಳಿದಾರರಿಗೆ ಸಹಾಯ ಮಾಡುವ ವ್ಯವಸ್ಥೆ ಮಾಡಬೇಕು.

ಸಚಿವ ಸಂಪುಟದ ಉಪ ಸಮಿತಿಯು ---------------

40. ರಾಜ್ಯದಲ್ಲಿರುವ ಉದ್ಯಮಗಳಿಗೆ ಬೇಕಾಗಿರುವ ವಿಶೇಷ ತಾಂತ್ರಿಕ ತರಬೇತಿ ಪಡೆಯಲು ಉದ್ಯೋಗ ತರಬೇತಿ ಕೇಂದ್ರಗಳಲ್ಲಿ ( ಐಟಿಐ) ಹಾಗೂ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಅವಕಾಶ ಮಾಡಿದರೆ ಹೊರ ರಾಜ್ಯದಿಂದ ಈ ವಿಶೇಷ ತರಬೇತಿ ಪಡೆದ ಅಭ್ಯರ್ಥಿಗಳನ್ನು ಕರೆಯಿಸಿಕೊಳ್ಳುವ ಅವಶ್ಯಕತೆಯಿರುವುದಿಲ್ಲ. ಸಮಿತಿಯ ಉದ್ಯಮಗಳಿಗೆ ಭೇಟಿಕೊಟ್ಟಾಗ ಇಂತಹ ತಾಂತ್ರಿಕ ವಿಷಯಗಳನ್ನು ಗುರುತಿಸಿ ಅವುಗಳ ಪಟ್ಟಿಯನ್ನು ಸಂಗ್ರಹಿಸಿ ಕೊಟ್ಟಿರುವುದು. ಈ ಬಗ್ಗೆ ಸರಕಾರವು ಸೂಕ್ತ ವ್ಯವಸ್ಥೆ ಮಾಡಬೇಕು.

ಸಚಿವ ಸಂಪುಟದ ಉಪ ಸಮಿತಿಯು - ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ ಈ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಶಿಫಾರಸು ಮಾಡಿದೆ.

41. ಪ್ರಾಥಮಿಕ ಮಟ್ಟದಲ್ಲಿಯೇ ಐಚ್ಛಿಕವಾಗಿ ವೃತ್ತಿ ತರಬೇತಿ ಪಡೆಯುವ ವ್ಯವಸ್ಥೆ ಮಾಡಬೇಕು.

ಸಚಿವ ಸಂಪುಟದ ಉಪ ಸಮಿತಿಯು - ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ ಈ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಶಿಫಾರಸು ಮಾಡಿದೆ.

42. ಕೈಗಾರಿಕಾ ವಸಾಹತುಗಳು ಹಾಗೂ ದೊಡ್ಡ ಪ್ರಮಾಣದ ಉದ್ಯಮಗಳು ಸ್ಥಾಪನೆಯಾಗುವ ಪ್ರದೇಶಗಳಲ್ಲಿ ಸ್ಥಳೀಯರಿಗೆ ಉದ್ಯೋಗಾವಕಾಶ ದೊರೆಯುವಂತೆ ಮಾಡಲು ಅಲ್ಲಿ ವೃತ್ತಿ ತರಬೇತಿ ಕೇಂದ್ರ ಹಾಗೂ ಉದ್ಯೋಗ ವಿನಿಮಯ ಕೇಂದ್ರಗಳನ್ನು ತೆರೆಯುವ ವ್ಯವಸ್ಥೆ ಮಾಡಬೇಕು.

ಸಚಿವ ಸಂಪುಟದ ಉಪ ಸಮಿತಿಯು - ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ ಈ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಶಿಫಾರಸು ಮಾಡಿದೆ.

43. ರೈಲ್ವೆ ನೇಮಕಾತಿ ಮಂಡಳಿಯಲ್ಲಿ ಕರ್ನಾಟಕದ ಗಣ್ಯ ವ್ಯಕ್ತಿಗಳ ಸದಸ್ಯರನ್ನಾಗಿ ನೇಮಕ ಮಾಡುವ ವ್ಯವಸ್ಥೆ ಮಾಡಬೇಕು. ಮಂಡಳಿಯು ನಡೆಯುವ ನೇಮಕಾತಿಯಲ್ಲಿ ಕನ್ನಡ ಭಾಷಾ ಜ್ಞಾನವನ್ನು ಪರೀಕ್ಷಿಸಬೇಕು. ತೆಗೆದುಹಾಕಲ್ಪಟ್ಟ ( ರಿಟ್ರೆಂಚ್ಡ್) ದಿನಗೂಲಿ ನೌಕರರನ್ನು ಪುನ: ನೇಮಕ ಮಾಡುವಾಗ ಆಯಾ ಭಾಷಾ ಪ್ರಾಂತ್ಯದಲ್ಲಿ ಮಾತ್ರ ನೇಮಕ ಮಾಡಬೇಕು.

ಸಚಿವ ಸಂಪುಟದ ಉಪ ಸಮಿತಿಯು - ಈ ಶಿಫಾರಸನ್ನು ಒಪ್ಪಿಕೊಂಡಿದೆ.

44. ಹುಬ್ಬಳ್ಳಿ ರೈಲ್ವೆ ಡಿವಿಜನಿನಲ್ಲಿ ಸಾಂದರ್ಭಿಕ ಕೆಲಸಗಾರರ ಹುದ್ದೆಗಳಿಗೆ ಬಹಿರಂಗವಾಗಿ ಅರ್ಜಿಗಳನ್ನು ಆಹ್ವಾನಿಸುವುದು ಅಥವಾ ಉದ್ಯೋಗ ವಿನಿಮಯ ಕೇಂದ್ರಗಳನ್ನು ಸಂಪರ್ಕಿಸುವುದು ಈ ಕ್ರಮಗಳನ್ನು ಕೈಗೊಳ್ಳದೆ ರೈಲ್ವೆ ಇನ್ ಸ್ಪೆಕ್ಟರ್ ರವರು ಯಾರಿಗೆ ಬೇಕಾದರೂ ಆಯ್ಕೆ ಮಾಡಬಹುದಾಗಿದೆ. ಈ ಸಾಂಧರ್ಭಿಕ ಕೆಲಸಗಾರರನ್ನು ಮುಂದೆ ಗ್ರೂಪ್ 'ಡಿ' ಹುದ್ದೆಗಳಿಗೆ ನೇಮಕ ಮಾಡುವುದರಿಂದಸಾಂಧರ್ಭಿಕ ಕೆಲಸಗಾರರನ್ನು ಆಯ್ಕೆ ಮಾಡುವಾಗ ಉದ್ಯೋಗ ವಿನಿಮಯ ಕೇಂದ್ರದ ಮೂಲಕ ಆಥವಾ ಪತ್ರಿಕೆ ಗ್ರಾಮ ಪಂಚಾಯತಿಗಳ ಮೂಲಕ ಪ್ರಕಟಣೆ ನೀಡುವ ವ್ಯವಸ್ಥೆ ಮಾಡಬೇಕು.

ಸಚಿವ ಸಂಪುಟದ ಉಪ ಸಮಿತಿಯು - ಈ ಶಿಫಾರಸಿನ ಬಗ್ಗೆ ಕೇಂದ್ರ ಸರಕಾರದೊಡನೆ ಸಮಾಲೋಚಿಸುವಂತೆ ಶಿಫಾರಸು ಮಾಡಿದೆ.

45. ರೈಲ್ವೆಯಲ್ಲಿ ಬೆಂಗಳೂರಿನಲ್ಲಿ ಕೇಂದ್ರ ಕಾರ್ಯಸ್ಥಾನವಿರುವ ಒಂದು ದಕ್ಷಿಣ ಪಶ್ಚಿಮ ವಲಯವನ್ನು ಸ್ಥಾಪಿಸಬೇಕೆಂಬ ಬೇಡಿಕೆ ಇದೆ. ಇದರಿಂದ ಕನ್ನಡಿಗರ ಉದ್ಯೋಗಾವಕಾಶ ಹಾಗೂ ಇತರ ಸೌಲಭ್ಯಗಳು ಹೆಚ್ಚಾಗುವ ಸಾಧ್ಯತೆಯಿರುವುದರಿಂದ ರಾಜ್ಯ ಸರಕಾರವು ಈ ಬೇಡಿಕೆಯನ್ನು ಪುಷ್ಟೀಕರಿಸಬೇಕು.

ಸಚಿವ ಸಂಪುಟದ ಉಪ ಸಮಿತಿಯು - ಈ ಶಿಫಾರಸಿನ ಬಗ್ಗೆ ಕೇಂದ್ರ ಸರಕಾರದೊಡನೆ ಸಮಾಲೋಚಿಸುವಂತೆ ಶಿಫಾರಸು ಮಾಡಿದೆ.

46. ಒಂದು ಶತಮಾನದಿಂದ ಕಾರ್ಯ ನಡೆಸಿಕೊಂಡು ಬಂದಿರುವ ಹುಬ್ಬಳ್ಳಿ ರೈಲ್ವೆ ವರ್ಕ್ ಷಾಪನ್ನು ರಾಜ್ಯದಿಂದ ಹೊರಗೆ ವರ್ಗಾಯಿಸಲು ನಡೆಯುತ್ತರುವ ಪ್ರಯತ್ನವನ್ನು ರಾಜ್ಯ ಸರಕಾರವು ವಿರೋಧಿಸಿ ನಿಲ್ಲಿಸಬೇಕು.

ಸಚಿವ ಸಂಪುಟದ ಉಪ ಸಮಿತಿಯು - ಈ ಶಿಫಾರಸಿನ ಬಗ್ಗೆ ಕೇಂದ್ರ ಸರಕಾರದೊಡನೆ ಸಮಾಲೋಚಿಸುವಂತೆ ಶಿಫಾರಸು ಮಾಡಿದೆ

47. ರಾಜ್ಯದ ಮುಖ್ಯ ನಗರಗಳಲ್ಲಿ ನಿವೇಶನಗಳನ್ನು ಕನ್ನಡಿಗರಿಗೆ ಆದ್ಯತೆ ಮೇಲೆ ಹಂಚುವಂತೆ ಈ ಕೆಳಗಿನ ನಿಯಮಗಳನ್ನು ರೂಪಿಸಬೇಕು.

(1) ಅರ್ಜಿ ಹಾಕಲು ಅರ್ಹತೆ ಪಡೆಯಬೇಕಾದರೆ 15 ವರ್ಷ ರಾಜ್ಯದಲ್ಲಿ ವಾಸವಾಗಿದ್ದರಬೇಕು.

(2) ವಾಸವಾಗಿದ್ದದನ್ನು ರುಜುವಾತುಪಡಿಸಲು ಶಾಲೆಯ ಸರ್ಟಿಫಿಕೇಟ್ ಪಡಿತರ ಚೀಟಿ. ಮತದಾರರ ಪಟ್ಟಿ ಮತ್ತು ಜನ್ಮ ದಾಖಲೆ ಇವಿಷ್ಟನ್ನು ಒದಗಿಸಬೇಕು.

(3) ಸೈನದಲ್ಲಿ ಸೇವೆ ಸಲ್ಲಿಸುತ್ತಿರುವವರು ಮತ್ತು ಉದ್ಯೋಗಕ್ಕಾಗಿ ಅಥವಾ ಉನ್ನತ ಶಿಕ್ಷಣಕ್ಕಾಗಿ ಹೊರ ರಾಜ್ಯಕ್ಕೆ ಹೋದವರು ಹೊರತು, ಇನ್ನಾರಿಗೂ 15 ವರ್ಷಗಳ ವಾಸ ನಿಯಮದಿಂದ ರಿಯಾಯಿತಿ ಕೊಡಬೇಕಿಲ್ಲ.

(4) ಖಾಸಗಿ ಬಡಾವಣೆಗಳು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ನಿಯಮಗಳನ್ನು ಪಾಲಿಸುವಂತೆ ಮತ್ತು ನಿವೇಶನ ಹಂಚುವ ಮೊದಲು ಪ್ರಾಧಿಕಾರದ ಅನುಮೋದನೆ ಪಡೆಯುವಂತೆ ಆದೇಶಿಸಬೇಕು.

(5) ಗೃಹ ನಿರ್ಮಾಣ ಸಹಕಾರಿ ಸಂಘಗಳು ಸಹ ಪ್ರಾಧಿಕಾರದ ನೀತಿಯನ್ನು ಅನುಸರಿಸುವುದಲ್ಲದೆ, ಪ್ರಾಧಿಕಾರದ ಅನುಮೋದನೆಯನ್ನು ಪಡೆಯುವಂತೆ ಆದೇಶಿಸಬೇಕು.

ಸಚಿವ ಸಂಪುಟದ ಉಪ ಸಮಿತಿಯು ---------------

48. ಸರಕಾರವು ಕನ್ನಡಿಗರಿಗೆ ಶೇ. ೮೦ ರಷ್ಟು ಉದ್ಯೋಗಾವಕಾಶವನ್ನು ನಿಗದಿತ ಕಾಲಮಿತಿಯೊಳಗೆ ಸಾಧಿಸುವ ದೃಢ ಸಂಕಲ್ಪವನ್ನು ಮಾಡುವುದಲ್ಲದೆ ಈ ಬಗ್ಗೆ ಅನಾವಶ್ಯಕ ಪ್ರಚಾರವನ್ನು ಬಿಟ್ಟು ಇದನ್ನು ಕೃತಿಯಲ್ಲಿಯೇ ತರಬೇಕು. ಈ ವಿಷಯದಲ್ಲಿ ಧೈರ್ಯ ಮಾಡಿ ಎಂಬ ಕಿವಿಮಾತನ್ನು ಸರಕಾರಕ್ಕೆ ತಿಳಿಸಲು ಸಮಿತಿ ಬಯಸುವುದು.

ಸಚಿವ ಸಂಪುಟದ ಉಪ ಸಮಿತಿಯು - ಈ ಶಿಫಾರಸನ್ನು ಒಪ್ಪಿಕೊಂಡಿದೆ.

49. ಕರ್ನಾಟಕದ ರೈತರಿಗೆ ಸಹಾಯ ಮಾಡಲು ರಾಜ್ಯದಲ್ಲಿರುವ ನಬಾರ್ಡ್ ಸಂಸ್ಥೆಯಲ್ಲಿ ಕನ್ನಡಿಗರಿರಬೇಕಾಗಿರುವುದು ಸಹಜ. ಆದುದರಿಂದ ಈ ಸಂಸ್ಥೆಯ ಬೆಂಗಳೂರು ಶಾಖೆಗೆ ನೇಮಕಾತಿ ಮಾಡಲು ಬೆಂಗಳೂರಲ್ಲಿಯೇ ಒಂದು ನೇಮಕಾತಿ ಸಮಿತಿಯನ್ನು ರಚಿಸುವಂತೆ ಒತ್ತಾಯಿಸಬೇಕು.

ಸಚಿವ ಸಂಪುಟದ ಉಪ ಸಮಿತಿಯು - ಈ ಬಗ್ಗೆ ಕೇಂದ್ರ ಸರಕಾರದೊಡನೆ ಸಮಾಲೋಚಿಸುವಂತೆ ಶಿಫಾರಸು ಮಾಡಿದೆ.

50. ಕೇಂದ್ರ ಸರಕಾರದ 8/3/.84 ರ ಅಧಿಕೃತ ಜ್ಞಾಪನ ಪತ್ರದಂತೆ ಕೇಂದ್ರ ಸರಕಾರಿ ವಲಯದ ಉದ್ಯಮಗಳಲ್ಲಿ ವೇತನ ಶ್ರೇಣಿಯ ಪರಮಾವಧಿ ರೂ.1.250 ಕ್ಕಿಂತ ಹೆಚ್ಚು ಇರದ ಹುದ್ದೆಗಳಿಗೆ ನ್ಯಾಷನಲ್ ಎಂಪ್ಲಾಯ್ ಮೆಂಟ್ ಸರ್ವಿಸ್ ಮೂಲಕ ಅಭ್ಯರ್ಥಿಗಳನ್ನು ಆಯ್ಕೆ ಮಾಡಬೇಕು. ವೇತನ ಶ್ರೇಣಿಯ ಮಿತಿಯನ್ನು1600 ಕ್ಕೆ ಏರಿಸುವುದಲ್ಲದೆ ವೇತನ ಶ್ರೇಣಿ ಪರಿಷ್ಕರಣೆಯಾದಾಗಲೆಲ್ಲ ಈ ಮಿತಿಯನ್ನು ಪರಿಷ್ಕರಿಸುತ್ತಾ ಬರಬೇಕು.

ಸಚಿವ ಸಂಪುಟದ ಉಪ ಸಮಿತಿಯು - 2 ನೇ ಶಿಫಾರಸ್ಸಿನ ಬಗ್ಗೆ ಮಾಡಿರುವ ಶಿಫಾರಸನ್ನು ನೋಡಬುದೆಂದು ಹೇಳಿದೆ.

51. ಅರಣ್ಯದ ಹುಟ್ಟುವಳಿಯ ವಿಶೇಷತ: ಕಟ್ಟಿಗೆಯ ಮೇಲೆ ಅವಲಂಬಿಸಿದ ಉದ್ಯಮಗಳಿಗೆ ಅನುಕೂಲವಾಗುವಂತೆ ಅರಣ್ಯದ ಹುಟ್ಟುವಳಿಯ ಅಪವ್ಯಯವನ್ನು ತಪ್ಪಿಸಲು ಕ್ರಮ ತೆಗೆದುಕೊಳ್ಳಬೇಕು.

ಸಚಿವ ಸಂಪುಟದ ಉಪ ಸಮಿತಿಯು ---------------

52. ರಾಜ್ಯದಲ್ಲಿ ಸ್ಥಾಪಿಸಬಹುದಾದ ಉದ್ಯಮಗಳನ್ನು ಗುರುತಿಸಿ ಅವುಗಳ ಬಗ್ಗೆ ಪ್ರಾಜಕ್ಟ್‌ರಿಪೋರ್ಟ್ ಗಳನ್ನು ತಯಾರಿಸಿ ಪ್ರಕಟಿಸುವ ವ್ಯವಸ್ಥೆ ಮಾಡಬೇಕು.

ಸಚಿವ ಸಂಪುಟದ ಉಪ ಸಮಿತಿಯು ---------------

53. ಕರ್ನಾಟಕದಲ್ಲಿ ಸ್ಟಾಫ್ ಸೆಲೆಕ್ಷನ್ ಕಮಿಷನ್ ಆಫ್ ಇಂಡಿಯಾ – ಇದರ ಒಂದು ಶಾಖೆಯನ್ನು ತೆರೆಯುವಂತೆ ಸರಕಾರವನ್ನು ಒತ್ತಾಯಿಸಬೇಕು.

ಬೆಂಗಳೂರಿನಲ್ಲಿ 'ಸ್ಟಾಫ್ ಸೆಲೆಕ್ಷನ್ ಕಮಿಷನ್ ಆಫ್ ಇಂಡಿಯಾ' ಇದರ ಒಂದು ಶಾಖೆಯನ್ನು ಈಗಾಗಲೇ ತೆರೆದಿರುವುದರಿಂದ ಈ ಶಿಫಾರಸ್ಸಿನ ಮೇಲೆ ಯಾವ ಕ್ರಮವೂ ಅಗತ್ಯವಿರುವುದಿಲ್ಲ.

54. ಇ. ಎಮ್. ಡಿ ವಿನಾಯಿತಿ ಆದೇಶವನ್ನು ಹೊರಡಿಸುವಾಗ ಅದಕ್ಕೆ ಮೂರು ಅಥವಾ ಐದು ವರ್ಷಗಳ ಕಾಲದ ದೀರ್ಘಾವಧಿಯನ್ನು ಕೊಡುವಂತೆಯೂ, ಆದರೆ ನವೀಕರಣ ಆದೇಶವನ್ನು ಅವಧಿ ಅಂತ್ಯದೊಳಗೆ ಹೊರಡಿಸುವಂತೆಯೂ ಆದೇಶಿಸಬೇಕು.

ಸಚಿವ ಸಂಪುಟದ ಉಪ ಸಮಿತಿಯು ---------------

55. ವಿಧಾನ ಮಂಡಲದಲಗಲಿ ಒಂದು ಸಾರ್ವಜನಿಕ ಉದ್ಯಮಗಳ ಸಮಿತಿ ಇದ್ದು ಆ ಸಮಿತಿಯು ಅದರ ಅಧಿಕಾರ ವ್ಯಾಪ್ತಿಯೊಳಗೆ ಬರುವ ಹಲವು ನಿಗಮ/ ಮಂಡಳಿ/ ಕಂಪೆನಿಗಳ ಲೆಕ್ಕಪತ್ರ, ಕಾರ್ಯದಕ್ಷತೆ ಇತ್ಯಾದಿ ವಿಷಯಗಳನ್ನು ಪರಿಶೀಲಿಸುವುದು. ಈ ಕಾರ್ಯದೊಂದಿಗೆ ಸಮಿತಿಯು ಕನ್ನಡಿಗರಿಗೆ ಸೂಕ್ತ ಪ್ರಮಾಣದ ಉದ್ಯೋಗಾವಕಾಶ ದೊರೆಯುತ್ತಿರುವುದೇ ಎಂಬ ವಿಷಯವನ್ನು ಸಹ ಪರಿಶೀಲಿಸಿದರೆ ಇದರಿಂದ ಉದ್ಯಮಗಳ ಆಡಳಿತ ವರ್ಗದ ಮೇಲೆ ತೀವ್ರವಾದ ಪರಿಣಾಮ ಉಂಟಾಗುವುದು ನಿಸ್ಸಂದೇಹ. ಈ ಪರಿಶೀಲನೆಗೆ ಅವಕಾಶವಾಗುವಂತೆ ಸಮಿತಿಯ ಕಾರ್ಯವಿಧಾನಕ್ಕೆ ಸಂಬಂಧಪಟ್ಟ ನಿಯಮಗಳಲ್ಲಿ ಸೂಕ್ತ ತಿದ್ದುಪಡಿಯನ್ನು ಮಾಡಬೇಕು.

ಸಚಿವ ಸಂಪುಟದ ಉಪ ಸಮಿತಿಯು ---------------

56. ಲೋಕಸೇವಾ ಆಯೋಗ ಹಾಗೂ ನೇಮಕಾತಿ ಸಮಿತಿಗಳು ಜಾಹೀರಾತುಗಳನ್ನು ಕರ್ನಾಟಕದಲ್ಲಿ ಮುದ್ರಣವಾಗುವ ಪತ್ರಿಕೆಗಳಿಗೆ ಮಾತ್ರ ಪ್ರಕಟಿಸಲು ಕೊಡಬೇಕು.

ಸಚಿವ ಸಂಪುಟದ ಉಪ ಸಮಿತಿಯು ---------------

57. ಎಂಪ್ಲಾಯ್ ಮೆಂಟ್ ನ್ಯೂಸ್ ಪತ್ರಿಕೆಯ ಮಾದರಿಯಲ್ಲಿ ರಾಜ್ಯ ಸರಕಾರವು ಒಂದು ಪತ್ರಿಕೆಯನ್ನು ಪ್ರಕಟಿಸಬೇಕು.

ಸಚಿವ ಸಂಪುಟದ ಉಪ ಸಮಿತಿಯು - ಈ ಶಿಫಾರಸನ್ನು ಒಪ್ಪಿಕೊಂಡಿದೆ.

58. ಗೆಜೆಟೆಡ್ ಪ್ರೋಬೇಷನರ್ಸ್ ಹುದ್ದೆಗಳಿಗೆ ನಡೆಸುವ ಸ್ಪರ್ಧಾತ್ಮಕ ಪರೀಕ್ಷೆಯ ವಿಷಯ ಪಟ್ಟಿಯಲ್ಲಿ ಅರಾಬಿಕ್, ಚೈನೀಸ್, ಫ್ರೆಂಚ್, ಜರ್ಮನ್, ಲ್ಯಾಟೀನ್, ಪಾಲಿ ಪರ್ಶಿಯನ್, ರಷ್ಯನ್, ಸ್ಪಾನಿಪ್ – ಈ ಅನಾವಶ್ಯಕ ವಿಷಯಗಳನ್ನು ತೆಗೆದುಹಾಕಬೇಕು.

ಸಚಿವ ಸಂಪುಟದ ಉಪ ಸಮಿತಿಯು - ಈ ಶಿಫಾರಸನ್ನು ಒಪ್ಪಿಕೊಂಡಿದೆ.